ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಡಿಸೆಂಬರ್ 2016 ಮಾಸ ಪತ್ರಿಕೆ

ಸಂಪುಟ : 39
ಸಂಚಿಕೆ : 3
ಪುಟ : 12
ಬೆಲೆ : ₹ 10/-


## ಹಿಂದು ಆಧ್ಯಾತ್ಮಿಕ ಮತ್ತು ಸೇವಾ ಮೇಳ










ಶಿಕ್ಷಕರಿಗೆ ಸಂಕಲ್ಪ ಏಕೆ –ಹೇಗೆ? **3**

ವ್ಯಕ್ತಿ ನಿರ್ಮಿತಿಯ ಶಿಕ್ಷಕ 'ಸೂರೂಜಿ' **5**


A Journal of Karnataka State Secondary Teachers' Association

# ಸಂಪಾದಕೀಯ

‘ಶಿಕ್ಷಕ ಸಮಾಚಾರ’ದ ಡಿಸೆಂಬರ್ ಸಂಚಿಕೆ ನಿಮ್ಮ ಕೈ ಸೇರಿದ ಕೆಲವೇ ದಿನಗಳಲ್ಲಿ 2017 ಕಾಲಿಡಲಿದೆ. ವ್ಯಾವಹಾರಿಕವಾಗಿ ಹೊಸವರ್ಷವಾಗಿ ಸ್ವೀಕರಿಸುವ 2017ಕ್ಕೆ ಎಲ್ಲಾ ಶಿಕ್ಷಕ ಮಿತ್ರರು ಹಾಗೂ ಚಂದಾದಾರರಿಗೆ ಶುಭಾಶಯಗಳು. ಜೊತೆಜೊತೆಗೇ ಮಕರ ಸಂಕ್ರಾಂತಿಯೂ ಸಮೀಪದಲ್ಲೇ ಬರಲಿದೆ. ಸಂಕ್ರಾಂತಿಯು ಋತುಮಾನದ ಬದಲಾವಣೆಯ ದ್ಯೋತಕ. ಹವಾಮಾನದಲ್ಲಿ ಬದಲಾವಣೆಯಾಗುವುದರ ಸೂಚಕ ಸಂಕ್ರಾಂತಿ. ಬದಲಾವಣೆ ಹವಾಮಾನದಲ್ಲಿ ಮಾತ್ರವಲ್ಲದೆ ದೇಶದಲ್ಲಿ ಉತ್ತಮ ಪರಿವರ್ತನೆಯ ಗಾಳಿ ನೋಟು ರದ್ದತಿಯಿಂದಾಗಿ ಬೀಸಲಾರಂಭಿಸಿದೆ ಎಂದರೆ ತಪ್ಪಾಗಲಾರದು. ಈ ಮೂಲಕ ಸಮಾಜವನ್ನು ಸ್ವಚ್ಛಗೊಳಿಸುವ ಪ್ರಯತ್ನ ಆರಂಭವಾಗಿದೆಯಲ್ಲವೇ?. “ಶಿಕ್ಷಕ ಸಮಾಚಾರವು’ ಎಲ್ಲಾ ಚಂದಾದಾರರು ಹಾಗೂ ಶಿಕ್ಷಕ ವೃಂದಕ್ಕೆ ‘ಸಂಕ್ರಾಂತಿ’ಯ ಶುಭಾಶಯವನ್ನು ಕೋರುತ್ತದೆ.

ಡಿಸೆಂಬರ್ ಕಳೆಯಿತೆಂದರೆ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಪರೀಕ್ಷೆಯ ವೇಗ, ಬಿಸಿ ಹೆಚ್ಚಾಗುತ್ತದೆ. ಹತ್ತನೆಯ ತರಗತಿಯ ವಿದ್ಯಾರ್ಥಿಗಳಿಗೆ ಸಿದ್ಧತಾ ಪರೀಕ್ಷೆಗಳ ಸರಣಿ ಪ್ರಾರಂಭ. 2017ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಶ್ನಪತ್ರಿಕೆ ಹಾಗೂ ಉತ್ತರಪತ್ರಿಕೆಗಳು ಹಿಂದಿನ ಹಳೆಯ ಪದ್ಧತಿಯಲ್ಲಿದ್ದಂತೆ ಬೇರೆಬೇರೆ ಇರುತ್ತದೆ ಎಂದು ಪರೀಕ್ಷಾ ಮಂಡಳಿ ಹಾಗೂ ಶಿಕ್ಷಣ ಸಚಿವರು ಸೂಚಿಸಿರುತ್ತಾರೆ. ಈಗ ಇರುವಂತೆ ವಿದ್ಯಾರ್ಥಿಗಳು ಪ್ರಶ್ನಪತ್ರಿಕೆಯಲ್ಲಿಯೇ ಉತ್ತರವನ್ನು ಬರೆಯಬೇಕಾಗಿತ್ತು. ಪ್ರಶ್ನೆಪತ್ರಿಕೆ- ಉತ್ತರಪತ್ರಿಕೆಗಳು ಒಂದೇ ಆಗಿರುವುದು ವಿದ್ಯಾರ್ಥಿಗೂ ಅನುಕೂಲಕರ. ಅನಗತ್ಯವಾದ ಉತ್ತರಗಳನ್ನು ಬರೆಯಲು ಅವಕಾಶವಿರುವುದಿಲ್ಲ. ಉತ್ತರಪತ್ರಿಕೆಗಳಲ್ಲಿ ಪ್ರಶ್ನೆಗಳ ಸಂಖ್ಯೆಯನ್ನು ತಪ್ಪಾಗಿ ಬರೆಯುವ ಸಂದರ್ಭ ಇರುವುದಿಲ್ಲ. ಉತ್ತರಪತ್ರಿಕೆಯೇ ಬೇರೆ ಎಂದಾದಾಗ ಹಲವಾರು ಸಮಸ್ಯೆಗಳು ಎದುರಾಗುತ್ತವೆ. ವಿಶೇಷವಾಗಿ ಮೌಲ್ಯಮಾಪಕರು ಮೌಲ್ಯಮಾಪನದಲ್ಲಿ ಸಾಕಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹಿಂದೆ ಈ ಪದ್ಧತಿ ಇದ್ದಾಗ ಮಂಡಳಿಯು ಪ್ರಕಟಿಸುತ್ತಿದ್ದ ಫಲಿತಾಂಶದಲ್ಲಿ ಅನೇಕ ಏರುಪೇರುಗಳಾಗುತ್ತಿದ್ದುದು, ಪ್ರಶ್ನೆಪತ್ರಿಕೆಯಲ್ಲೇ ಉತ್ತರಗಳನ್ನು ಬರೆಯುವ ಪದ್ಧತಿ ಬಂದ ನಂತರ ಫಲಿತಾಂಶದಲ್ಲಿ ದೋಷಗಳು ಗಣನೀಯವಾಗಿ ಕಡಿಮೆಯಾಗಿತ್ತು ಎಂದರೆ ತಪ್ಪಾಗಲಾರದು. ಈಗ ಉತ್ತರಪತ್ರಿಕೆಯೇ ಬೇರೆ ಎಂದಾದಾಗ ಮತ್ತೆ ಫಲಿತಾಂಶ ಪ್ರಕಟಣೆಯಲ್ಲಿ ದೋಷಗಳು ಹೆಚ್ಚಾಗುವ ಸಾಧ್ಯತೆಗಳಿವೆ ಎಂಬ ಸಂಶಯ ಸಹಜವಾಗಿ ಮೂಡುತ್ತದೆ. ಪ್ರಶ್ನಪತ್ರಿಕೆ ಪ್ರತ್ಯೇಕವಾಗಿದ್ದರೆ ವಿದ್ಯಾರ್ಥಿಗಳು ಪ್ರಶ್ನಪತ್ರಿಕೆಯನ್ನು ಹೊಂದಬಹುದು ಎಂಬ ಒಂದು ಕಾರಣಕ್ಕೆ ಅನೇಕ ಸಂಕಷ್ಟಗಳಿಗೆ ದಾರಿಮಾಡುವ ಪದ್ಧತಿಗೆ ಮತ್ತೆ ಹಿಂತಿರುಗುವುದು ಎಷ್ಟು ಸಮಂಜಸ ? ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ತರುತ್ತಿರುವ ಹಳೆಯ ಪದ್ಧತಿಯ ಪ್ರಶ್ನಪತ್ರಿಕೆಯ ಬಗ್ಗೆ ಶಿಕ್ಷಕ ಸಂಘಗಳು, ಶಿಕ್ಷಕ ಪ್ರತಿನಿಧಿಗಳು, ಶಿಕ್ಷಣತಜ್ಞರು ಧ್ವನಿ ಎತ್ತಿ ಚರ್ಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸಮಯವಲ್ಲವೇ ಇದು?. ಸಂಬಂಧಿಸಿದವರೆಲ್ಲರೂ ಈ ಪದ್ಧತಿಯ ಸಾಧಕ-ಬಾಧಕಗಳ ಬಗ್ಗೆ ಗಮನಹರಿಸುವರೆಂದು ಆಶಿಸೋಣ.

ಕನ್ನಡ ಸಾಹಿತ್ಯದ ಅತ್ಯಂತ ಜನಪ್ರಿಯ, ಜ್ಞಾನಪೀಠಪ್ರಶಸ್ತಿ ಪುರಸ್ಕೃತ, ರಾಷ್ಟ್ರಕವಿ ಕುವೆಂಪು. ಕುಪ್ಪಳ್ಳಿಯ ಕುವೆಂಪು ಜನಿಸಿದ್ದು ಡಿಸೆಂಬರ್ 29ರಂದು. ಜೈನ ಹಾಗೂ ಬೌದ್ಧ ಸಾಹಿತ್ಯವನ್ನು ಕನ್ನಡಕ್ಕೆ ಹೆಚ್ಚಾಗಿ ಪರಿಚಯಿಸಿದ, ಮಕ್ಕಳ ಸಾಹಿತ್ಯಕ್ಕೆ ಹೆಚ್ಚು ಗಮನ ಹರಿಸಿದ, “ರತ್ನನ ಪದಗಳು” ಖ್ಯಾತಿಯ ಜಿ. ಪಿ. ರಾಜರತ್ನಂರವರ ಜನನ ಡಿಸೆಂಬರ್ 5 ರಂದು. ಅಂತೆಯೇ ಖ್ಯಾತ ಕಾದಂಬರಿಕಾರರಾದ ವ್ಯಾಸರಾಯಬಲ್ಲಾಳರು, ದೇವುಡುರವರು ಜನಿಸಿದ್ದು ಕ್ರಮವಾಗಿ ಡಿಸೆಂಬರ್ 1 ಹಾಗೂ 27ನೇ ತಾರೀಖುಗಳಂದು. ಕನ್ನಡ ಸಾರಸ್ವತ ಲೋಕದ ಮತ್ತೊಬ್ಬ ಪ್ರಸಿದ್ಧ ವಿದ್ವಾಂಸರು ಎಸ್.ವಿ. ರಂಗಣ್ಣನವರು ಜನಿಸಿದ್ದೂ ಡಿಸೆಂಬರ್ ತಿಂಗಳಲ್ಲೇ.

ಡಿಸೆಂಬರ್ ತಿಂಗಳಲ್ಲಿ ಅಸ್ತಂಗತರಾದ ಸಾಹಿತ್ಯ ಲೋಕದ ದಿಗ್ಗಜರೆಂದರೆ ಆರ್. ನರಸಿಂಹಾಚಾರ್ಯ, ಶಿವರಾಮಕಾರಂತರು, ಫರ್ಡಿನಾಂಡ್ ಕಿಟೆಲ್, ಮಿರ್ಜಿ ಅಣ್ಣಾರಾಯ ಹಾಗೂ ಜಿ.ಬಿ ಜೋಷಿ. ಈ ಎಲ್ಲಾ ಮಹನೀಯರನ್ನು ಸ್ಮರಿಸುತ್ತಾ ಅವರ ಸಾಹಿತ್ಯವನ್ನು ಓದಿ ಪರಿಚಯ ಮಾಡಿಕೊಳ್ಳಬೇಕಾದ ಸಮಯವಿದು.

‘ವಿಶ್ವವಿಜೇತ’, ‘ವಿಶ್ವಮಾನವ’ ಸ್ವಾಮಿ ವಿವೇಕಾನಂದರು ಯುವಶಕ್ತಿಯಲ್ಲಿ ಅಪಾರ ವಿಶ್ವಾಸ ಇಟ್ಟಿದ್ದವರು. ವಿವೇಕಾನಂದರ ಜನ್ಮದಿವಸವನ್ನು ಪ್ರತಿವರ್ಷ ಜನವರಿ 12ರಂದು “ರಾಷ್ಟ್ರೀಯ ಯುವದಿನಾಚರಣೆ’ಯನ್ನಾಗಿ ಆಚರಿಸಲಾಗುವುದು. ವಿವೇಕಾನಂದರ ವಿಚಾರಧಾರೆಗಳು ಎಂಥವರನ್ನೂ ಬಡಿದೆಬ್ಬಿಸುವುದು. ಅಂತಹ ಸ್ಫೂರ್ತಿಯುತರ ವಿಚಾರಗಳು ನಮಗೆಲ್ಲಾ ದಾರಿದೀಪವಾಗಲಿ ಎಂದು ಆಶಿಸೋಣ.

ಸಂಪಾದಕರು

## ಸೂಕ್ತಿ




ಸರ್ವೇಷಾಮೇವ ಶೌಚಾನಾಂ
ಅರ್ಥಶೌಚಂ ಪರಂಸ್ಮೃತಂ ।
ಯೋರ್ಥೇ ಶುಚಿಃ ಸಹಿ ಶುಚಿಃ
ನ ಮೃದ್ವಾದಿ ಶುಚಿಃ ಶುಚಿಃ ॥

ಎಲ್ಲಾ ರೀತಿಯ ಶುದ್ಧಿಗಳಲ್ಲಿ ಅತ್ಮಶುದ್ಧಿಯೇ ಶ್ರೇಷ್ಠ. ಹಣಕಾಸಿನ ವ್ಯವಹಾರದಲ್ಲಿ ಪಾರದರ್ಶಕತೆ ಕಾಪಾಡಿಕೊಂಡವನೇ ನಿರ್ಮಲ ಪುರುಷ ಎನಿಸುತ್ತಾನೆ. ಕೇವಲ ಮಣ್ಣು, ಸಾಬೂನು, ನೀರು ಮುಂತಾದವುಗಳಿಂದ ಶುಚಿಗೊಳಿಸಿದರೆ ಅಂಥವನು ದೈಹಿಕವಾಗಿ ಶುಚಿಯಾಗುತ್ತಾನೆಯೇ ಹೊರತು ಅಂತರಂಗದಿಂದಲ್ಲ. ಅತಿಕ್ರಮಣ, ವಂಚನೆ, ಚೌರ್ಯ ಇಂಥ ಕುತ್ಸಿತ ಮಾರ್ಗದ ಧನಸಂಪಾದನೆಯು ಅಶುಚಿಯ ಪರಮಾವಧಿ ಎನಿಸಿದೆ.

\- ಮನುಸ್ಮೃತಿ

## ಪರಿವಿಡಿ


- ಶಿಕ್ಷಕರಿಗೆ ಸಂಕಲ್ಪ ಏಕೆ –ಹೇಗೆ? 3
- ವ್ಯಕ್ತಿ ನಿರ್ಮಿತಿಯ ಶಿಕ್ಷಕ ‘ಸೂರೂಜಿ’ 5
- ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಒಂದು ಅವಲೋಕನ 6
- ಅಂತರ್ಜಾಲದ ಮಾಹಿತಿ 7
- ‘ಬಡ್ತಿ ಮತ್ತು ಭರ್ತಿ’ ಗೆ ಆಗ್ರಹಿಸಿ ಮನವಿ 8
- ಕಲ್ಬುರ್ಗಿಯಲ್ಲಿ ಕಾರ್ಯಾಗಾರ 9
- ಸುತ್ತೋಲೆ 10
- ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಮತ್ತು ಕಾರ್ಯ 11
- ಚಿತ್ರ ಸುದ್ದಿ 12

# ಶಿಕ್ಷಕರಿಗೆ ಸಂಕಲ್ಪ ಏಕೆ –ಹೇಗೆ?

ಜೀವನದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಿದವರ ಬಗ್ಗೆ ಒಂದು ನೋಟ ಹರಿಸೋಣ.

ಐ.ಸಿ.ಎಸ್. ಮುಗಿಸಿದ ನಂತರ ಸ್ವಂತ ಏಳಿಗೆಯನ್ನು ಲೆಕ್ಕಿಸದೆ ಆಜಾದ್ ಹಿಂದ್ ಸೇನೆ ಕಟ್ಟಿ, ಪೂರ್ವ ಭಾರತ ಆಕ್ರಮಿಸಿ ಇಂಗ್ಲೀಷರನ್ನು ಹಣ್ಣುಗಾಯಿ, ನೀರುಗಾಯಿ ಮಾಡಿ ಸಾವಿರಾರು ಜನರಿಗೆ ಸ್ವಾತಂತ್ರ್ಯದ ಹುಚ್ಚು ಹತ್ತಿಸಿ ನಮ್ಮ ದೇಶವನ್ನು ಸ್ವತಂತ್ರಗೊಳಿಸಿದ ಮಹಾನ್ ಪುರುಷ ಡಾ॥ ಸುಭಾಷ್ ಚಂದ್ರ ಬೋಸ್.

ಗಾಂಧಿಜೀಯವರೂ ಇದಕ್ಕೆ ಹೊರತೇನಲ್ಲ. ಖ್ಯಾತ ವಿಜ್ಞಾನಿ– ಭಾರತದ ತಂತ್ರಜ್ಞಾನದ ಜನಕ– ಅಭಿವೃದ್ಧಿ ಹೊಂದಿದ ಭಾರತದ ಕನಸನ್ನು ತಲೆಯಲ್ಲಿರಿಸಿಕೊಂಡು ದೃಢ ಸಂಕಲ್ಪದಿಂದ ಹೆಜ್ಜೆಯಿರಿಸಿ ಯಶಸ್ಸು ಸಾಧಿಸಿದ ಮಹಾನ್ ವ್ಯಕ್ತಿ ಡಾ॥ ಅಬ್ದುಲ್ ಕಲಾಂ.

ಏಕನಿಷ್ಠೆ, ಭವ್ಯಕಲ್ಪನೆ, ಅವಿರತ ಪರಿಶ್ರಮ ಹಾಗೂ ಸಂಘಟನಾ ಕೌಶಲ್ಯವಿರುವ ಶ್ರೀ ಏಕನಾಥ ರಾನಡೆಯವರ ಬಲಿಷ್ಠ, ಧೃಡಿಷ್ಠ ಭಾರತದ ಸ್ವಪ್ನ ಸಾಕಾರಗೊಳಿಸುವ ಉತ್ಕಟ ಇಚ್ಛೆಯ ಫಲವೇ ಕನ್ಯಾಕುಮಾರಿಯರಲ್ಲಿನ "ವಿವೇಕಾನಂದ ಕೇಂದ್ರ ಸ್ಥಾಪನೆ" ದೇಶದ ಸ್ವಾತಂತ್ರ್ಯ ಒಂದೇ ಅಲ್ಲ. ವಿವಿಧ ಕ್ಷೇತ್ರಗಳಲ್ಲಿ ವೈಯುಕ್ತಿಕ ಹಾಗೂ ಸಾಮಾಜಿಕ ಯಶಸ್ಸು ಪಡೆಯಬೇಕಾದರೆ ನಿರ್ದಿಷ್ಟ ಗುರಿ ತಲುಪುವ ಹಾದಿ ಕಠಿಣವಾದದ್ದೇ. ಆದರೆ ದೃಢನಿರ್ಧಾರದಿಂದ, ಸಂಕಲ್ಪದಿಂದ ಖಂಡಿತ ಕೆಲಸ ಸಾಧಿಸಬಹುದು.

ರಾಮಾಯಣದಲ್ಲಿ ದೃಢ ಸಂಕಲ್ಪದಿಂದ ಹನುಮಂತನು ಸೀತೆಯನ್ನು ತಲುಪಲು ಸಮುದ್ರೋಲ್ಲಂಘನ ಮಾಡಿದನು.

ಆಧ್ಯಾತ್ಮ ಸಾಧನೆಗಾಗಿ ಅನೇಕ ದಾಸಶ್ರೇಷ್ಠರು ಅಚಲ ನಿರ್ಧಾರ ದೃಢ ಸಂಕಲ್ಪಮಾಡಿ ಸಾಮಾಜಿಕ ಬದಲಾವಣೆಯ ಹರಿಕಾರರಾದರು.

ವಿವೇಕಾನಂದರು "ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧ" 'ಏಳಿ ಎಚ್ಚರಗೊಳ್ಳಿ, ಗುರಿ ಮುಟ್ಟುವವರೆಗೂ ನಿಲ್ಲದಿರಿ' ಎಂದು ಸಾರಿ ಹೇಳಿದರು. ಈ ಪ್ರಾಪಂಚಿಕ ಮೋಹ ನಿದ್ರೆಯಿಂದ ಎದ್ದೇಳಿ. ಏಕೆಂದರೆ ಆತ್ಮವು ಸರ್ವಶಕ್ತ, ಸರ್ವಜ್ಞ, ಸರ್ವವ್ಯಾಪಿಯಾದುದು. ಅಂತೆಯೇ ಎದ್ದುನಿಲ್ಲಿ ನಿಮ್ಮ ಆಸ್ಮಿತೆಯನ್ನು ಪ್ರಸ್ಥಾಪಿಸಿ ನಿಮ್ಮ ನಿಜ ಸ್ವರೂಪವನ್ನು ಅರ್ಥಮಾಡಿಕೊಂಡು ಕಾರ್ಯಪ್ರವೃತ್ತರಾಗಿ

## ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.)

**ನಂ.55, 'ಯಾದವಸ್ಮೃತಿ', 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು –20**

## ಸಂಕಲ್ಪ

**ಸರ್ವಶಕ್ತಿವಂತನಾದ ಭಗವಂತನನ್ನು ಹಾಗೂ ನಮ್ಮ ಹಿಂದಿನ ಶ್ರೇಷ್ಠ ಗುರುಪರಂಪರೆಯನ್ನು ಸ್ಮರಿಸುತ್ತಾ ತ್ಯಾಗ, ಸೇವೆ, ಕರ್ಮಠತೆಗಳ ಸಾಕಾರಮೂರ್ತಿಯಾಗಿ ನಾಡಿನ ಜನತೆಗೆ, ಏಳಿ ಎದ್ದೇಳಿ ಗುರಿ ಮುಟ್ಟುವವರೆಗೂ ನಿಲ್ಲದಿರಿ ಎಂಬ ರಾಷ್ಟ್ರೀಯ ಕರ್ತವ್ಯದ ಕರೆ ನೀಡಿದ ವೀರಸನ್ಯಾಸಿ ಸ್ವಾಮಿ ವಿವೇಕಾನಂದರ ಜನ್ಮ ಜಯಂತಿಯ ಈ ಪವಿತ್ರ ಸಂದರ್ಭದಲ್ಲಿ ನಾನು ಹೀಗೆ ಸಂಕಲ್ಪ ಮಾಡುತ್ತೇನೆ.**

**"ಶಿಕ್ಷಕ ವೃತ್ತಿಯು ಶ್ರೇಷ್ಠವಾದ ವೃತ್ತಿ" ಯೆಂದು ಪ್ರಜ್ಞಾಪೂರ್ವಕವಾಗಿ ತಿಳಿದೇ ನಾನು ಈ ವೃತ್ತಿಯನ್ನು ಸ್ವೀಕರಿಸಿದ್ದೇನೆ. ನನ್ನ ವೃತ್ತಿಯಲ್ಲಿ ನೈಪುಣ್ಯವನ್ನು ಗಳಿಸಿಕೊಳ್ಳಲು ಸದಾ ಕಾರ್ಯತತ್ಪರನಾಗಿ, ನನ್ನ ಸ್ವಂತ ಜೀವನದ ಆದರ್ಶದ ಮೂಲಕ, ನನ್ನ ವಿದ್ಯಾರ್ಥಿಗಳಲ್ಲಿ ಸದ್ಗುಣಗಳನ್ನು ಮೂಡಿಸಿ ಅವರನ್ನು ಉತ್ತಮ ಪ್ರಜೆಗಳಾಗಿ ರೂಪಿಸುವ ನನ್ನ ಹೊಣೆಗಾರಿಕೆಯನ್ನು ನಾನು ಕಾಯಾ, ವಾಚಾ ಮನಸಾ ನಿರ್ವಹಿಸಲು ವಚನ ಬದ್ಧನಾಗಿದ್ದೇನೆ.**

ಪುಟ 9 ಕ್ಕೆ ➤

➢ ಪುಟ 3 ರಿಂದ..... ಶಿಕ್ಷಕರ ಸಂಕಲ್ಪ...

ಕಾರ್ಯದ ಪಣತೊಡಿರಿ. 'ಹುಲ್ಲು ಹೊಸೆದು ಹಗ್ಗ ಮಾಡಿದಾಗ ಮದಗಜವನ್ನು ಬಂಧಿಸಬಹುದು' ಎಂಬುದನ್ನು ನೆನಪಿಸಿದರು.

ಪ್ರಾಚೀನ ಕಾಲದಿಂದ ಇಲ್ಲಿಯವರೆಗೂ ಉನ್ನತ ಸಾಧನೆಗಾಗಿ ಸಂಕಲ್ಪದ ಅನಿವಾರ್ಯತೆ ಇದೆ.

ಸಂಕಲ್ಪ ಒಂದು ಕಟ್ಟಡದ ಅಡಿಪಾಯವಿದ್ದಂತೆ. ಸುಭದ್ರ ಅಡಿಪಾಯದ ಮೇಲೆ ನಿಂತ ಕಟ್ಟಡ ಸದೃಢವಾಗಿರುತ್ತದೆ.

ದೃಢ ಸಮಾಜದ ನಿರ್ಮಾಣಕ್ಕೆ ಶಿಕ್ಷಕರ ಸಂಕಲ್ಪವೇ ಪೂರಕ.

"ಗುರುವಿನಗುಲಾಮನಾಗದ ತನಕ ದೊರೆಯದಣ್ಣ ಮುಕುತಿ" ಎನ್ನವರು ಗುರುಬೋಧನ ಇಲ್ಲದೇ ಮುಂದಿನ ಪಾಠವೇ ಇಲ್ಲ.

ಮುಂಬರುವ ಪೀಳಿಗೆಯ ರೂವಾರಿಗಳಾದ ನಾವು ಶಿಕ್ಷಕರು ವೃತ್ತಿ ನೈಪುಣ್ಯತೆ ಪಡೆದು, ವಿದ್ಯಾರ್ಥಿಗಳಿಗೆ ಮಾದರಿ (ರೋಲ್ ಮಾಡೆಲ್). ಈ ದೃಷ್ಟಿಯಿಂದ ಅಖಿಲಭಾರತೀಯ ರಾಷ್ಟ್ರೀಯ ಶೈಕ್ಷಿಕ ಸಂಘವು ಇಡೀ ದೇಶದಲ್ಲಿ ಜನವರಿ 12 ರಂದಿನ ವಿವೇಕಾನಂದರ ಜನ್ಮದಿನದಿಂದ 23 ರಂದಿನ ಸುಭಾಷ್‌ಚಂದ್ರ ಬೋಸರ ಜನ್ಮದಿನದ ನಡುವಿನ ಸಮಯದಲ್ಲಿ, ಎಂದಾದರೊಂದು ದಿನ ಆರಿಸಿಕೊಂಡು ಎಲ್ಲ ಶಿಕ್ಷಕರೂ ಪ್ರಾಮಾಣಿಕವಾಗಿ ತಮ್ಮನ್ನು ತಾವು ತಮ್ಮ ವೃತ್ತಿಗೆ ಕಾಯಾ ವಾಚಾ ಮನಸಾ ಸಮರ್ಪಿಸಿಕೊಳ್ಳುವ ಸಂಕಲ್ಪ ತೊಡಲು ಕರೆನೀಡಿರಿ. ಸಂಕಲ್ಪ ಆಗುವ ವ್ಯಕ್ತಿತ್ವವನ್ನು ಪಡೆದು ಇಡೀ ಸಮಾಜಕ್ಕೆ ಸುದೃಷ್ಟಿ ಕೊಡುವ ದಾರಿ ದೀಪಗಳಾಗುವ ಸಂಕಲ್ಪ ಮಾಡಬೇಕು.

ಡಾ॥ ಸುಭಾಷ್ ಚಂದ್ರಬೋಸ್, ಹಾಗೂ ವಿವೇಕಾನಂದರ ಜನ್ಮ ಜಯಂತಿಯ ಈ ಶುಭ ಸಂದರ್ಭದಲ್ಲಿ ಕಾಯಾವಾಚಾ ಮನಸಾ ರಾಷ್ಟ್ರ ಪುನರ್‌ನಿರ್ಮಾಣದ ಸಂಕಲ್ಪವನ್ನು ತೊಡೋಣ.

ಸದೃಢ ಸಮಾಜದ ಸತ್ಕಾರ್ಯ ಕಾರ್ಯರೂಪಗೊಳಿಸಲು ತೆಗೆದುಕೊಳ್ಳಬೇಕಾದ ಸಂಕಲ್ಪದಿನದ ಆಯೋಜನೆ ಹೇಗಿರಬೇಕು? ಎನ್ನುವುದರ ಬಗ್ಗೆ ವಿಚಾರ ಮಾಡೋಣ.

ಸಂಕಲ್ಪ ದಿನ ಅಥವಾ ಕರ್ತವ್ಯ ಬೋಧನೆ ದಿವಸವನ್ನು ಅಖಿಲ ಭಾರತೀಯ ಶೈಕ್ಷಿಕ್ ಮಹಾಸಂಘದ ಆಶ್ರಯದಲ್ಲಿ ದೇಶದಾದ್ಯಂತ ಆಚರಿಸಲಾಗುತ್ತಿದೆ.

ಶಿಕ್ಷಕರಿಗೆ ಕರ್ತವ್ಯ ಬೋಧನೆ ಒಂದೇ ಅಲ್ಲ ಸಮಾಜದ ಮೇಲಿನ ಅವರ ಕರ್ತವ್ಯವನ್ನು ಜಾಗೃತಗೊಳಿಸಲು ಸಹಾಯವಾಗುವ ಹಾಗೂ ಪ್ರೇರಣೆಯಾಗುವಂತಾಗುವ ಈ ಕಾರ್ಯಕ್ರಮದ ರೂಪುರೇಖೆ ದೇಶದಾದ್ಯಂತ ಒಂದೇ ರೀತಿ ಇರಬೇಕೆಂದು ಕೆಲವು ಯೋಜನೆಗಳನ್ನು ರೂಪಿಸಲಾಗಿದೆ.

1. ಪ್ರತಿ ನಗರ ಅಥವಾ ಜಿಲ್ಲೆಯಲ್ಲಿ ಒಂದಕ್ಕಿಂತ ಹೆಚ್ಚು ವಿದ್ಯಾಲಯಗಳಲ್ಲಿ ಸಂಕಲ್ಪದಿನ ಆಚರಿಸಬೇಕು.
2. ತಾಲ್ಲೂಕುಗಳಲ್ಲಿ ವಲಯಶಃ ಪ್ರಯತ್ನ ಪೂರ್ವಕವಾಗಿ ಮಾಡಬೇಕು. ವಿಶ್ವವಿದ್ಯಾಲಯಗಳು, ಮಹಾವಿದ್ಯಾಲಯಗಳು ಸೇರಿ ಮಾಡಬಹುದು.
3. ಶಿಕ್ಷಣ ಕ್ಷೇತ್ರದಲ್ಲಿನ ಶಿಕ್ಷಣ ತಜ್ಞರು, ಸಂತರು ಇತರ ಆದರ್ಶ ವ್ಯಕ್ತಿಗಳ ನೇತೃತ್ವದಲ್ಲಿ ಕನಿಷ್ಠ 2 ಗಂಟೆ ಕಾರ್ಯಕ್ರಮವನ್ನು ನಡೆಸಬೇಕು.
4. ಶಿಕ್ಷಣ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರೆ ಸಂಘಟನೆಯ ವಿಚಾರಗಳನ್ನು ಇವರಿಗೆ ಮನವರಿಕೆ ಮಾಡಬಹುದು.
5. ಮಹಾವಿದ್ಯಾಲಯದ ವಿದ್ಯಾರ್ಥಿಗಳನ್ನು ಕೂಡ ಈ ಕಾರ್ಯಕ್ರಮದಲ್ಲಿ ಜೋಡಿಸಬಹುದು.
6. ಶಿಕ್ಷಕ ಕಾರ್ಯಕರ್ತ ಸಭಾ ನಿರೂಪಣೆಗೆ ಮೊದಲೇ ಆಯೋಜಿಸಿದ್ದರೆ, ಕಾರ್ಯಕ್ರಮ ಕಾರ್ಯಕರ್ತ ಪರಿಣಾಮಕಾರಿಯಾಗುವುದು.
7. ಕಾರ್ಯಕ್ರಮ ಮುಕ್ತಾಯದ ನಂತರ ಕಾಪಿ ಅಥವಾ ಟೀ ವ್ಯವಸ್ಥೆ ಇದ್ದರೆ ಅನೌಪಚಾರಿಕ ಸಮಯದಲ್ಲಿ ಶಿಕ್ಷಕರು ಪರಸ್ಪರ ಆತ್ಮೀಯತೆಯನ್ನು ಬೆಳೆಸಿಕೊಳ್ಳಬಹುದು.
8. ವೇದಿಕೆಯಲ್ಲಿ ಅತಿ ಕಡಿಮೆ ಜನರಿರಬೇಕು ಮುಖ್ಯ ಅತಿಥಿಗೆ ಮಾತ್ರ ಮಾಲಾರ್ಪಣೆ ಮಾಡಬೇಕು.
9. ಭಾರತ್ ಮಾತಾ, ಸರಸ್ವತೀ ಚಿತ್ರಗಳ ಮುಂದೆ ದೀಪ ಹಚ್ಚುವುದು ಅವಶ್ಯ.
10. ಸ್ವಾಮಿವಿವೇಕಾನಂದ ಹಾಗೂ ಸುಭಾಷ್‌ಚಂದ್ರ ಬೋಸ್‌ರವರ ಚಿತ್ರಪಟ ಇಡಬೇಕು ಹಾಗೂ ಅವರ ಘೋಷವಾಕ್ಯವನ್ನು ಸಭಾಂಗಣದಲ್ಲಿ ಇಟ್ಟರೆ ಒಳಿತು.
11. ಕಾರ್ಯಕ್ರಮದ ಪ್ರಚಾರ ದೃಷ್ಟಿಯಿಂದ ಮಾಧ್ಯಮದವರನ್ನು ಕರೆಯಬೇಕು ಹಾಗೂ ಫೋಟೊ ಸಮೇತ ವರದಿ ಕಳುಹಿಸಬೇಕು.
12. ವೇದಿಕೆಯ ಮೇಲೆ ಎ.ಬಿ.ಆರ್.ಎಸ್.ಎಂ ಬ್ಯಾನರ್ ಇರಲೇಬೇಕು.
13. ಕೇಂದ್ರೀಯ ಕಾರ್ಯಾಲಯಕ್ಕೆ ಫೋಟೋ ಸಮೇತ ವರದಿಯನ್ನು ಮೇಲ್ ಹಾಗೂ ಪತ್ರ ಮುಖೇನ ಕಳುಹಿಸಬೇಕು.

ತಮ್ಮ ತಮ್ಮ ರಾಜ್ಯ/ಜಿಲ್ಲೆ, ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಲು ತಾವು ನೆರವಾಗಬೇಕೆಂದು ವಿನಂತಿ.

**ಆರ್. ಸೀತಾಲಕ್ಷ್ಮಿ**
**ರಾಷ್ಟ್ರೀಯ ಮಹಿಳಾ ಕಾರ್ಯದರ್ಶಿ**
**ಎ.ಬಿ.ಆರ್.ಎಸ್.ಎಂ.**

●

ಆದರ್ಶ ಶಿಕ್ಷಕ

# ವ್ಯಕ್ತಿ ನಿರ್ಮಿತಿಯ ಶಿಕ್ಷಕ 'ಸೂರೂಜಿ'



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ಶಿಕ್ಷಣ ಎಂದರೇನು? ಈ ಪ್ರಶ್ನೆಗೆ ಹಲವಾರು ವ್ಯಾಖ್ಯೆಗಳಿವೆ. ಆದರೆ ಭಾರತೀಯ ಪರಿಕಲ್ಪನೆಯಲ್ಲಿ, ಸ್ವಾಮಿ ವಿವೇಕಾನಂದರು ಕೊಟ್ಟ "ಯಾವ ಬಗೆಯ ಶಿಕ್ಷಣದಿಂದ ಶೀಲ ರೂಪು ಗೊಳ್ಳುವುದೋ, ಬುದ್ಧಿ ವಿಕಾಸಗೊಳ್ಳುವುದೋ ಮತ್ತು ಯಾವುದರಿಂದ ನಮ್ಮ ಸ್ವಂತ ಕಾಲಮೇಲೆ ನಾವು ನಿಂತುಕೊಳ್ಳಬಲ್ಲೆವೋ ಅದುವೇ ನೈಜ ಶಿಕ್ಷಣ' ಎಂಬ ವ್ಯಾಖ್ಯೆ ಅತ್ಯಂತ ಸೂಕ್ತವಾದದ್ದು. ಇಂತಹ ಶಿಕ್ಷಣವನ್ನು ಸಹಸ್ರಾರು ಯುವಕರಿಗೆ ನೀಡಿ ತನ್ಮೂಲಕ ಅವರನ್ನು ವಿವೇಕಾನಂದರ "ಪರಹಿತಕ್ಕಾಗಿ ನಿಮ್ಮ ಜೀವನವನ್ನು ಮುಡುಪಿಡಿ'. ನೀವು ತ್ಯಾಗ ಜೀವನವನ್ನು ಆರಿಸಿಕೊಳ್ಳಿ. ಹಣ ಅಧಿಕಾರಗಳ ಕಡೆ ತಿರುಗಿಯೂ ನೋಡಬೇಡಿ' ಎಂಬ ಕರೆಗೆ ಸಿದ್ಧ ಪಡಿಸಿದವರು ಮಾನ್ಯ ಶ್ರೀ ಕೃ. ಸೂರ್ಯನಾರಾಯಣರಾಯರು. ಹಾಗೆಂದು ಅವರು ಯಾವ ಶಾಲಾ ಕಾಲೇಜು, ವಿಶ್ವವಿದ್ಯಾಲಯದಲ್ಲಿ ಶಿಕ್ಷಕರಾಗಿರಲಿಲ್ಲ. ಹೊಟ್ಟೆ ಹೊರೆಯಲೆಂದು ಶಿಕ್ಷಕ ವೃತ್ತಿ ಸ್ವೀಕರಿಸಿದವರಲ್ಲ. ಆದರೆ ಪ್ರಾಚೀನ ಗುರುಕುಲ ಪದ್ಧತಿಯಂತೆ ತಮ್ಮ ಸ್ವಂತ ಜೀವನದ ಆಚರಣೆಯ ಆದರ್ಶವನ್ನು ಯುವ ಜನರ ಮುಂದಿಟ್ಟು ಅವರಿಗೆ ಜೀವನ ಶಿಕ್ಷಣವನ್ನು ಬೋಧಿಸಿದರು. ಅವರಿಂದ ಪ್ರೇರಣೆ ಪಡೆದ ಸಹಸ್ರಾರು ಜನ ನಿಃಸ್ವಾರ್ಥ ಸೇವೆಮಾಡುವ ದೀಕ್ಷೆ ತೊಟ್ಟು ರಾಷ್ಟ್ರ ಜೀವನದ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ತಮ್ಮೆಲ್ಲ ವಿದ್ಯಾರ್ಥಿಗಳಿಗೆ, ಸಹಕಾರಿಗಳಿಗೆ 'ಸೂರೂಜಿ' ಎಂದೇ ಪರಿಚಿತರಾದ ಶ್ರೀ ಸೂರ್ಯನಾರಾಯಣರಾಯರು, 20.8.1924 ರಂದು ಶ್ರೀ ಕೃಷ್ಣಪ್ಪ ಹಾಗೂ ಶ್ರೀಮತಿ ಸುಂದರಮ್ಮ ದಂಪತಿಗಳ ಜೇಷ್ಠ ಪುತ್ರನಾಗಿ, ಮೈಸೂರಲ್ಲಿ ಜನ್ಮ ತಳೆದರು. ತಮ್ಮ ವಿದ್ಯಾರ್ಥಿ ಜೀವನದಲ್ಲೇ, ಸ್ವಾಮಿವಿವೇಕಾನಂದರ ಕಲ್ಪನೆಯ ಭಾರತವನ್ನು ಕೃತಿಗಿಳಿಸಲೆಂದು ಪ್ರಾರಂಭವಾದ 'ರಾಷ್ಟ್ರೀಯ ಸ್ವಯಂಸೇವಕ ಸಂಘ ಎಂಬ ಅಸಾಮಾನ್ಯ ಸಂಘಟನೆಯ ಸಂಪರ್ಕಕ್ಕೆ ಬಂದರು. ಅವರ ಜೀವನಕ್ಕೊಂದು ದೃಷ್ಟಿ ಸಿಕ್ಕಿತು.

22ನೇ ವಯಸ್ಸಿನಲ್ಲಿ ಬಿಎಸ್ಸಿ (ಆನರ್ಸ್) ಪದವಿ ಮುಗಿಸಿದ ನಂತರ 70 ವರ್ಷಗಳ ಕಾಲ ಆರ್.ಎಸ್.ಎಸ್‌ನ ಪೂರ್ಣಾವಧಿ ಕಾರ್ಯಕರ್ತರಾಗಿ ಸಮಾಜಸೇವೆಯಲ್ಲಿ ತೊಡಗಿಸಿಕೊಂಡರು.

1948ರಲ್ಲಿ ಅಂದಿನ ಕೇಂದ್ರ ಸರ್ಕಾರ ಆರ್.ಎಸ್.ಎಸ್ ಅನ್ನು ನಿರ್ಬಂಧಿಸಿತು. ಸೂರೂಜಿ ಸೆರೆಮನೆಸೇರಿದರು. 18 ತಿಂಗಳ ಕಾಲ ಅಲ್ಲಿ ವಿವೇಕಾನಂದರ ಸಮಗ್ರ ಸಾಹಿತ್ಯವನ್ನು ಅಧ್ಯಯನಮಾಡಿದರು. ಸ್ವಾಮೀಜಿಯ ಸಂದೇಶವನ್ನು ತಮ್ಮ ನರನಾಡಿಗಳಲ್ಲಿ ತುಂಬಿಕೊಂಡರು. ಪ್ರತಿ ವಿವೇಕಾನಂದರೇ ಆದರು.

ಸೂರ್ಯನಾರಾಯಣರದ್ದು ಆರಡಿ ಎತ್ತರದ ಐವತ್ತು ಇಂಚಿಗೂ ಮಿಗಿಲಾದ ಎದೆಯಳತೆ. ನಗುಮುಖ, ತಾಯಿಯ ಹೃದಯ, ವಾಣಿಯಲ್ಲಿ ಮೃದುತ್ವ, ಮಾತಿಗೆ ನಿಂತರೆ ಪೂಂಖಾನುಪುಂಖವಾಗಿ ವಿವೇಕಾನಂದರ ಅಮೃತವಾಣಿ ಅವರ ಬಳಿ. ಕೂತರೆ ಮನಸ್ಸು ಚೇತೋಹಾರಿ, ಅವರ ವ್ಯಕ್ತಿತ್ವವೇ ಅಯಸ್ಕಾಂತದಂತೆ ಆಕರ್ಷಣೀಯ. ಹೀಗಾಗಿ ಬೆಲ್ಲಕ್ಕೆ ಇರುವೆಗಳು ಮುತ್ತುವಂತೆ ನೂರಾರು ತರುಣರು ಅವರ ವ್ಯಕ್ತಿತ್ವಕ್ಕೆ ಮಾರುಹೋಗಿ ಅವರು ತುಳಿದ ಮಾರ್ಗದಲ್ಲೇ ಹೆಜ್ಜೆ ಹಾಕುವ ಸಂಕಲ್ಪಮಾಡಿದ್ದಾರೆ.

ಕೋಟ್ಯಾಂತರ ಜನರನ್ನು ಏಕಸೂತ್ರದಲ್ಲಿ ಪೋಣಿಸುವ ಒಂದು ಸಂಘಟನೆಯನ್ನು ಕಟ್ಟಿ ಬೆಳೆಸುವುದು ಸುಲಭದ ಕೆಲಸವಲ್ಲ. ಅದರಲ್ಲೂ ಹಿಂದೂಗಳನ್ನು! 1925 ರಲ್ಲಿ ಡಾ|| ಕೇಶವ ಬಲಿರಾಂ ಹೆಡಗೇವಾರರು ನಾಗಪುರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬೀಜಾರೋಪಣ ಮಾಡಿದರು. 15 ವರ್ಷಗಳ ನಂತರ ಅದರದೊಂದು ಕುಡಿ ಕರ್ನಾಟಕದಲ್ಲಿ ನೆಡಲ್ಪಟ್ಟಿತು. ಅದನ್ನು ವೃಕ್ಷವಾಗಿ ಬೆಳೆಸುವುದರಲ್ಲಿ ಸೂರೂಜಿ ಪಟ್ಟ ಪರಿಶ್ರಮ ಅಸಾಧಾರಣ. ತಮಿಳು ನಾಡು ಸಂಘಕಾರ್ಯಕ್ಕೆ ಮರುಭೂಮಿ. ಸೂರೂಜಿ 1970ರಲ್ಲಿ ಆ ಮರುಭೂಮಿಯಲ್ಲಿ ಸಂಘವೃಕ್ಷವನ್ನು ಚಿಗುರಿಸಲು ಕರ್ನಾಟಕದಿಂದ ತೆರಳಿದರು. 1984 ರ ವರೆಗೆ 14 ವರ್ಷಗಳ ಕಾಲಾವಧಿಯಲ್ಲಿ, ಸಂಘಕಾರ್ಯ ದೃಢವಾಗಿ ನಿಲ್ಲುವಂತೆ ಮಾಡಿದರು. ಈ ಕಾಲಖಂಡದಲ್ಲಿ ಅವರು ಬೆಳೆಸಿದ ಕಾರ್ಯಕರ್ತರ ಸಂಖ್ಯೆಗೆ ಲೆಕ್ಕವೇ ಇಲ್ಲ.

1989ರಲ್ಲಿ ಸಂಘ (ಆರ್.ಎಸ್.ಎಸ್) ಸ್ಥಾಪಕರ ಶತಮಾನೋತ್ಸವ. ಆ ಸಮಯದಲ್ಲಿ ಎಲ್ಲ ಸ್ವಯಂ ಸೇವಕರನ್ನು ಯಾವುದಾದರೊಂದು ಸೇವಾಕಾರ್ಯದಲ್ಲಿ ತೊಡಗಿಸಬೇಕೆಂಬ ಸಂಕಲ್ಪ. ಈ ಸೇವಾ ಪ್ರಕಲ್ಪಗಳಿಗೆ ಸೂಕ್ತ ಮಾರ್ಗದರ್ಶನಕ್ಕಾಗಿ ಆಯ್ಕೆಯಾದವರು, ಸೂರ್ಯನಾರಾಯಣರಾಯರು. 1990 ರಿಂದ 2000ದ ವರೆಗಿನ ಹತ್ತು ವರ್ಷಗಳಲ್ಲಿ ಭಾರತದ ಮೂಲೆ ಮೂಲೆಗಳಲ್ಲಿ ಸ್ಲಂಗಳಲ್ಲಿ ಪಾಠದ ಕೇಂದ್ರಗಳು, ಶಿಶುನಿವಾಸಗಳು, ಅಬಲಾಶ್ರಮಗಳು, ಗ್ರಾಮವಿಕಾಸ ಹೀಗೆ ಹತ್ತು ಹಲವು ವಿಧದ ಸೇವಾಕೇಂದ್ರಗಳನ್ನು ಪ್ರಾರಂಭಿಸಲು ದೇಶಾದ್ಯಂತ ಸುತ್ತಾಡಿ

ಪುಟ 9 ಕ್ಕೆ ➢

ಶಿಕ್ಷಣ ಸೌರಭ

# ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್.ಎಂ. ಎಸ್. ಎ.) ಒಂದು ಅವಲೋಕನ



**ವಿ. ರಾಜ**
**ರಾಜ್ಯ ಶೈಕ್ಷಣಿಕ ಪ್ರಕೋಷ್ಠ ಪ್ರಮುಖರು**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವು ಪ್ರೌಢ ಶಿಕ್ಷಣವನ್ನು ವಿಸ್ತರಿಸುವ ಮತ್ತು ಗುಣಮಟ್ಟವನ್ನು ಸುಧಾರಿಸುವ ಗುರಿ ಹೊಂದಿದೆ. ಪ್ರೌಢ / ಮಾಧ್ಯಮಿಕ ಶಿಕ್ಷಣವನ್ನು ದೇಶದ ಮೂಲೆ ಮೂಲೆಗೂ ಹರಡುವ ಗುರಿಹೊಂದಿದೆ. ರಾಷ್ಟ್ರದ ಪ್ರತಿಯೊಂದು ಪ್ರದೇಶದಲ್ಲಿ 5 ಕಿ ಮೀ.ಒಳಗೆ ಪ್ರೌಢ / ಮಾಧ್ಯಮಿಕ ಶಾಲೆಯನ್ನು ಒದಗಿಸಲು ಯೋಜಿಸಿದೆ. ಭಾರತ ಸರ್ಕಾರದ ಇತ್ತೀಚಿನ ನಡೆಯಾದ ರಾಷ್ಟ್ರೀಯ ಪ್ರೌಢ / ಮಾಧ್ಯಮಿಕ ಶಿಕ್ಷಣ ಅಭಿಯಾನವು ಪ್ರೌಢ / ಮಾಧ್ಯಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಗುರಿಯನ್ನು ಮುಟ್ಟುವ ಸಾಧನವಾಗಿದೆ.

ಸರ್ಕಾರವು ಹಮ್ಮಿಕೊಂಡ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮವು ಮಿಲಿಯನ್ ಗಟ್ಟಲೆ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ತಲುಪಿಸಲು ಬಹು ಮಟ್ಟಿಗೆ ಯಶಸ್ವಿಯಾಗಿದೆ. ಅದರಿಂದ ಪ್ರೌಢ / ಮಾಧ್ಯಮಿಕ ಶಿಕ್ಷಣದ ಮೂಲ ಸೌಕರ್ಯವನ್ನು ರಾಷ್ಟ್ರದಲ್ಲಿ ಬಲಪಡಿಸುವ ಅಗತ್ಯ ಉಂಟಾಗಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಇದನ್ನು ಗಮನಿಸಿ ಪ್ರೌಢ / ಮಾಧ್ಯಮಿಕ ಶಿಕ್ಷಣ ಕಾರ್ಯಕ್ರಮವಾದ ರಾಷ್ಟ್ರೀಯ ಪ್ರೌಢ / ಮಾಧ್ಯಮಿಕ ಶಿಕ್ಷಣ ಅಭಿಯಾನವನ್ನು 11ನೇ ಯೊಜನಾ ಅವಧಿಯಲ್ಲಿ 20,120ಕೋಟಿ ರೂಪಾಯಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಯೋಜಿಸಿದೆ.

ಸರ್ವಶಿಕ್ಷಣ ಅಭಿಯಾನದ ಯಶಸ್ವಿ ಅನುಷ್ಠಾನದಿಂದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಹಿರಿಯ ಪ್ರಾಥಮಿಕ ಶಾಲೆಯಿಂದ ಹೊರ ಬರುತ್ತಿದ್ದಾರೆ. ಅದರಿಂದ ಪ್ರೌಢ / ಮಾಧ್ಯಮಿಕ ಶಾಲೆಗಳಿಗೆ ಹೆಚ್ಚಿನ ಬೇಡಿಕೆ ಉಂಟಾಗಿದೆ. ಎಂದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವೂ ತಿಳಿಸಿದೆ.

ಪ್ರೌಢ / ಮಾಧ್ಯಮಿಕ ಶಿಕ್ಷಣದ ಗುರಿಯು, ಉತ್ತಮ ಗುಣ ಮಟ್ಟದ ಪ್ರೌಢ / ಮಾಧ್ಯಮಿಕ ಶಿಕ್ಷಣವನ್ನು ಎಲ್ಲ 14–18 ವಯೋಮಾನದ ಹದಿಹರೆಯದವರಿಗೆ ದೊರೆಯುವಂತೆ, ಪಡೆಯಲು ಶಕ್ತರಾಗುವಂತೆ, ಅವಕಾಶ ಮಾಡುವ ಪರಿಕಲ್ಪನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಕೆಳಗಿನವುಗಳ ಸಾಧನೆಗೆ ಎಳೆಸಿದೆ.

ಯಾವುದೇ ವಾಸ ಸ್ಥಳದಿಂದ ಐದು ಕಿ. ಮೀ ಅಂತರದೊಳಗೆ ಪ್ರೌಢ / ಮಾಧ್ಯಮಿಕ ಶಿಕ್ಷಣಕ್ಕೆ ಅವಕಾಶವಿರುವಂತೆ ಮತ್ತು ಉನ್ನತ ಪ್ರೌಢ / ಮಾಧ್ಯಮಿಕ ಶಾಲೆಯನ್ನು 7–10 ಕಿ. ಮೀ ದೂರದೊಳಗೆ ಒದಗಿಸುವುದು.

2017ರೊಳಗೆ ಪ್ರೌಢ / ಮಾಧ್ಯಮಿಕ ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶವನ್ನು ಖಾತ್ರಿಗೊಳಿಸುವುದು.(ಜಿ.ಇ.ಆರ್ 100%) ಮತ್ತು 2020, ರೊಳಗೆ ವಿದ್ಯಾರ್ಥಿಗಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವ ಕ್ರಿಯೆಯ ಸಾರ್ವತ್ರಿಕರಣ.

ಪ್ರೌಢ / ಮಾಧ್ಯಮಿಕ ಶಿಕ್ಷಣದ ಲಭ್ಯತೆಯನ್ನು ವಿಶೇಷವಾಗಿ ಸಮಾಜದ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ, ಶೈಕ್ಷಣಿಕವಾಗಿ ಹಿಂದುಳಿದವರಿಗೆ, ಹುಡುಗಿಯರಿಗೆ, ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವ ವಿಕಲಚೇತನರಿಗೆ, ನಿರ್ಲಕ್ಷಿತ ವರ್ಗಗಳಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ಗುಂಪು, ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರಿಗೆ ಒದಗಿಸಬೇಕು .

ಪ್ರೌಢ / ಮಾಧ್ಯಮಿಕ ಶಿಕ್ಷಣದ ಸಾರ್ವತ್ರಿಕರಣದ ಸವಾಲನ್ನು ಎದುರಿಸಲು ಪ್ರೌಢ / ಮಾಧ್ಯಮಿಕ ಶಿಕ್ಷಣದ ಪರಿಕಲ್ಪನೆಯ ವಿನ್ಯಾಸದ ಮಾದರಿಯ ಬದಲಾವಣೆಯ ಅಗತ್ಯವಿದೆ. ಈ ದಿಶೆಯಲ್ಲಿನ ಮಾರ್ಗದರ್ಶಿ ತತ್ವಗಳು ಹೀಗಿವೆ: ಸಾರ್ವತ್ರಿಕ ಲಭ್ಯತೆ, ಸಮಾನತೆ, ಸಾಮಾಜಿಕ ನ್ಯಾಯ, ಸುಸಂಬದ್ಧತೆ ಮತ್ತು ಅಭಿವೃದ್ಧಿ ಮತ್ತು ಪಠ್ಯದ ರಚನಾತ್ಮಕ ಅಂಶಗಳು. ಪ್ರೌಢ / ಮಾಧ್ಯಮಿಕ ಶಿಕ್ಷಣದ ಸಾರ್ವತ್ರಿಕರಣವು ಸಮಾನತೆಯತ್ತ .ಸಾಗಲು ಅವಕಾಶ ಕೊಡುತ್ತದೆ. ಸಮಾನ ಶಾಲೆ ಎಂಬ ಪರಿಕಲ್ಪನೆಯನ್ನು ಉತ್ತೇಜಿಸಲಾಗುವುದು. ಈ ಮೌಲ್ಯಗಳು ವ್ಯವಸ್ಥೆಯಲ್ಲಿ ಬೇರೂರಿದರೆ, ಎಲ್ಲ ರೀತಿಯ ಶಾಲೆಗಳು, ಅನುದಾನರಹಿತ ಖಾಸಗಿಶಾಲೆಗಳೂ ಸೇರಿದಂತೆ. ಸಮಾಜದಲ್ಲಿ ಅವಕಾಶ ವಂಚಿತ ಮತ್ತು ಬಡತನರೇಖೆಯ ಕೆಳಗಿನ ( ಬಿ.ಪಿ.ಎಲ್ ) ಕುಟುಂಬಗಳ ಮಕ್ಕಳನ್ನು ದಾಖಲೆ ಮಾಡಿಕೊಳ್ಳುವ ಮೂಲಕ ಪ್ರೌಢ / ಮಾಧ್ಯಮಿಕ ಶಿಕ್ಷಣದ ಸಾರ್ವತ್ರಿಕರಣಕ್ಕೆ ಕೊಡುಗೆ ನೀಡಬಹುದು.

ಎಲ್ಲ ಪ್ರೌಢ / ಮಾಧ್ಯಮಿಕ ಶಾಲೆಗಳಿಗೆ ಭೌತಿಕ ಸೌಲಭ್ಯಗಳನ್ನು, ಸಿಬ್ಬಂದಿ, ಮತ್ತು ಇತರೆ ಅಗತ್ಯಗಳನ್ನು ಪೂರೈಸುವ ಖಾತ್ರಿ ಇರಬೇಕು. ಅದಕ್ಕೆಅಗತ್ಯವಾದ ಆರ್ಥಿಕ ನೆರವನ್ನು ಸರ್ಕಾರ / ಸ್ಥಳೀಯ ಸಂಸ್ಥೆಗಳು ಮತ್ತು ಸರಕಾರಿ ಅನುದಾನಿತ ಶಾಲೆಗಳಿಗೆ ಕೊಡಬೇಕು.ಇತರೆ ಶಾಲೆಗಳ ವಿಷಯದಲ್ಲಿ ಸೂಕ್ತವಾದ ನಿಯಂತ್ರಣ ವ್ಯವಸ್ಥೆ ಇರಬೇಕು.

➢ ಮುಂದಿನ ಸಂಚಿಕೆಗೆ....

# ಶಿಕ್ಷಕರಿಗೆ ಅಂತರ್ಜಾಲದ ಮಾಹಿತಿ

ಎಸ್.ಎಸ್.ಎಲ್.ಸಿ.ಯ ಕನ್ನಡ & ಇಂಗ್ಲೀಷ್ ಮಾಧ್ಯಮದ ಎಲ್ಲ ವಿಷಯಗಳ ಪಾಸಿಂಗ್ ಪ್ಯಾಕೇಜ್ ಪಡೆಯಲು ಈ ಕೆಳಗಿನ ತಂತ್ರಾಂಶಗಳನ್ನು ಬಳಸಿಕೊಳ್ಳಿ. ಶಿಕ್ಷಣಕ್ಕೆ ಸಂಬಂಧಿಸಿದ ಇತರೆ ವೆಬ್ ಸೈಟ್ಗಳು




>>> **ಕೆ.ಎಸ್.ಇ.ಇ.ಬಿ.ಯ ಪ್ರಶ್ನೆಪತ್ರಿಕೆ ನೋಡಲು ಇಲ್ಲಿ ಕ್ಲಿಕ್ ಮಾಡಿ**
http://kseeb.kar.nic.in/sslc_question_paper.asp

>>> **ಕೆ.ಎಸ್.ಇ.ಇ.ಬಿ.ಯ ಪ್ರಶ್ನೆಪತ್ರಿಕೆಯ ಉತ್ತರ ಕೀಲಿ ಕೈ ನೋಡಲು ಇಲ್ಲಿ ಕ್ಲಿಕ್ ಮಾಡಿ**
http://kseeb.kar.nic.in/sslc_key_answer.asp

>>> **ಡಿ.ಎಸ್.ಇ.ಆರ್.ಟಿ. ಮಾಹಿತಿ ತಿಳಿಯಲು ಇಲ್ಲಿ ಕ್ಲಿಕ್ ಮಾಡಿ**
http://dsert.kar.nic.in/

>>> **ಕರ್ನಾಟಕ ಸರ್ಕಾರದ ಆನ್‌ಲೈನ್ ಪಠ್ಯಪುಸ್ತಕ ಪಡೆಯಲು ಇಲ್ಲಿ ಕ್ಲಿಕ್ ಮಾಡಿ**
http://www.ktbs.kar.nic.in/New/index.html#%21/textbook

>>> **ಎನ್.ಸಿ.ಇ.ಆರ್.ಟಿ. ಆನ್‌ಲೈನ್ ಪಠ್ಯಪುಸ್ತಕ ಪಡೆಯಲು ಇಲ್ಲಿ ಕ್ಲಿಕ್ ಮಾಡಿ**
http://www.ncert.nic.in/NCERTS/textbook/textbook_hindi.html

>>> **ಪ್ರಥಮ ಭಾಷೆ ಕನ್ನಡದ ಪಾಸಿಂಗ್ ಪ್ಯಾಕೇಜ್ ಪಡೆಯಲು ಇಲ್ಲಿ ಕ್ಲಿಕ್ ಮಾಡಿ**
http://www.schooleducation.kar.nic.in/pdffiles/QnBank1415/1stLangKan.pdf

>>> **ದ್ವಿತೀಯ ಭಾಷೆ ಇಂಗ್ಲೀಷ್‌ನ ಪಾಸಿಂಗ್ ಪ್ಯಾಕೇಜ್ ಪಡೆಯಲು ಇಲ್ಲಿ ಕ್ಲಿಕ್ ಮಾಡಿ**
http://school education.kar.nic.in/pdffiles/QnBank1415/2ndLangEng.pdf

>>> **ತೃತೀಯ ಭಾಷೆ ಹಿಂದಿಯ ಪಾಸಿಂಗ್ ಪ್ಯಾಕೇಜ್ ಪಡೆಯಲು ಇಲ್ಲಿ ಕ್ಲಿಕ್ ಮಾಡಿ**
http://schooleducation.kar.nic.in/pdffiles/QnBank1415/3rdLangHindi.pdf

>>> **ಗಣಿತದ ಪಾಸಿಂಗ್ ಪ್ಯಾಕೇಜ್ ಪಡೆಯಲು ಇಲ್ಲಿ ಕ್ಲಿಕ್ ಮಾಡಿ**
http://schooleducation.kar.nic.in/pdffiles/QnBank1415/MathsKan.pdf

>>> **ವಿಜ್ಞಾನದ ಪಾಸಿಂಗ್ ಪ್ಯಾಕೇಜ್ ಪಡೆಯಲು ಇಲ್ಲಿ ಕ್ಲಿಕ್ ಮಾಡಿ**
http://schooleducation.kar.nic.in/pdffiles/QnBank1415/Sci_Kan.pdf

>>> **ಸಮಾಜ ವಿಜ್ಞಾನದ ಪಾಸಿಂಗ್ ಪ್ಯಾಕೇಜ್ ಪಡೆಯಲು ಇಲ್ಲಿ ಕ್ಲಿಕ್ ಮಾಡಿ**
http://schooleducation.kar.nic.in/pdffiles/QnBank1415/SSKan.pdf

>>> **ಗಣಿತದ ಇಂಗ್ಲಿಷ್ ಮಾಧ್ಯಮದ ಪಾಸಿಂಗ್ ಪ್ಯಾಕೇಜ್ ಪಡೆಯಲು ಇಲ್ಲಿ ಕ್ಲಿಕ್ ಮಾಡಿ**
http://schooleducation.kar.nic.in/pdffiles/QnBank1415/MathsEng.pdf

>>> **ವಿಜ್ಞಾನದ ಇಂಗ್ಲಿಷ್ ಮಾಧ್ಯಮದ ಪಾಸಿಂಗ್ ಪ್ಯಾಕೇಜ್ ಪಡೆಯಲು ಇಲ್ಲಿ ಕ್ಲಿಕ್ ಮಾಡಿ**
http://schooleducation.kar.nic.in/pdffiles/QnBank1415/SciEng.pdf

>>> **ಸಮಾಜ ವಿಜ್ಞಾನದ ಇಂಗ್ಲಿಷ್ ಮಾಧ್ಯಮದ ಪಾಸಿಂಗ್ ಪ್ಯಾಕೇಜ್ ಪಡೆಯಲು ಇಲ್ಲಿ ಕ್ಲಿಕ್ ಮಾಡಿ**
http://schooleducation.kar.nic.in/pdffiles/QnBank1415/SS_Eng.pdf

>>> **ಚಿಕ್ಕಮಗಳೂರು ಜಿಲ್ಲೆಯ ಪಾಸಿಂಗ್ ಪ್ಯಾಕೇಜ್ ಚೇತನ ಪಡೆಯಲು ಇಲ್ಲಿ ಕ್ಲಿಕ್ ಮಾಡಿ**
https://drive.google.com/drive/folders/0B6gJEnigYZ9xX21ZakxYVEtaS28%7C

>>> **ಮೈಸೂರು ಜಿಲ್ಲೆಯ ಪಾಸಿಂಗ್ ಪ್ಯಾಕೇಜ್ ಸಶಕ್ತ ಪಡೆಯಲು ಇಲ್ಲಿ ಕ್ಲಿಕ್ ಮಾಡಿ**
https://drive.google.com/drive/folders/0B6gJEnigYZ9xX21ZakxYVEtaS28%7C

>>> **ಕಲ್ಬುರ್ಗಿ ಜಿಲ್ಲೆಯ ಪಾಸಿಂಗ್ ಪ್ಯಾಕೇಜ್ ಪ್ರಯತ್ನಪಡೆಯಲು ಇಲ್ಲಿ ಕ್ಲಿಕ್ ಮಾಡಿ**
<https://drive.google.com/drive/folders/0B6gJEnigYZ9xX21ZakxYVEtaS28%7C>
https://drive.google.com/drive/folders/0B712NO1iyAWxNkJUQ3RHM2ZFU0U

>>> **For doubts on Ubuntu and other public software, visit**
http://karnatakaeducation.org.in/KOER/en/index.php/Frequently_Asked_Questions

**Mahantagoud T. Patil,** SWCM, KSPSTA

ಕಲಿಯುವುದನ್ನು ನಿಖರವಾಗಿ ಕಲಿಯಿರಿ – ಸ್ವಾಮಿ ವಿವೇಕಾನಂದ

# ಪ್ರೌಢಶಾಲಾ ಶಿಕ್ಷಕರ ಹಾಗೂ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಪದೋನ್ನತಿಗಾಗಿ 'ಬಡ್ತಿ ಮತ್ತು ಭರ್ತಿ' ಗೆ ಆಗ್ರಹಿಸಿ ಮನವಿ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ದಿನಾಂಕ 23.10.2016 ರಂದು ನಡೆದ ಪ್ರಾಂತ ಕೋರ್ ಕಮಿಟಿ ಸಭೆಯಲ್ಲಿ ಪ್ರೌಢಶಾಲಾ ಶಿಕ್ಷಕರ ಹಾಗೂ ಪದವಿ ಪೂರ್ವ ಉಪನ್ಯಾಸಕರ ಪದೋನ್ನತಿಗೆ ಆಗ್ರಹಿಸಿ, ಎಲ್ಲಾ ಜಿಲ್ಲಾ ಘಟಕಗಳ ಮೂಲಕ ಮನವಿಯನ್ನು ಸಲ್ಲಿಸುತ್ತಿದೆ.

## ಶಿಕ್ಷಕರ ಪ್ರಮುಖ ಬೇಡಿಕೆಗಳು

1. ಪ್ರೌಢಶಾಲೆಗಳ ಸಹ ಶಿಕ್ಷಕರನ್ನು ಮುಖ್ಯ ಶಿಕ್ಷಕರನ್ನಾಗಿ ಹಾಗೂ ಪದವಿ ಪೂರ್ವ ಉಪನ್ಯಾಸಕರಾಗಿ ಮತ್ತು ದೈಹಿಕ ಶಿಕ್ಷಕರ, ವೃತ್ತಿ ಶಿಕ್ಷಕರ ಪದೋನ್ನತಿಗಾಗಿ ಆಗ್ರಹ.
2. ಪ್ರೌಢಶಾಲೆಯ ಮುಖ್ಯ ಶಿಕ್ಷಕರನ್ನು ಶಿಕ್ಷಣಾಧಿಕಾರಿಗಳಾಗಿ ಪದೋನ್ನತಿಗಾಗಿ ಆಗ್ರಹ.
3. ಪದವಿ ಪೂರ್ವ ಉಪನ್ಯಾಸಕರನ್ನು ಪ್ರಾಂಶುಪಾಲರಾಗಿ ಪದೋನ್ನತಿಗಾಗಿ ಆಗ್ರಹ.
4. ಸರಕಾರಿ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿಯ ಶಿಕ್ಷಕರ ಕಾಲ್ಪನಿಕ ವೇತನ ಬಿಡುಗಡೆಗಾಗಿ ಆಗ್ರಹ.
5. ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿಯ ಖಾಲಿ ಹುದ್ದೆಗಳ ನೇಮಕಾತಿಗಾಗಿ ಆಗ್ರಹ.
6. ಸಹ ಶಿಕ್ಷಕರಿಗೆ ಮಾತ್ರ ನೀಡಿದ ವಿಶೇಷ ವೇತನ ಭತ್ಯೆಯನ್ನು ದೈಹಿಕ ಶಿಕ್ಷಕರು, ಚಿತ್ರಕಲಾ ಶಿಕ್ಷಕರು, ವೃತ್ತಿ ಶಿಕ್ಷಕರು ಹಾಗೂ ಸಂಗೀತ ಶಿಕ್ಷಕರುಗಳಿಗೂ ವಿಸ್ತರಿಸಲು ಆಗ್ರಹ.
7. ಪದವಿ ಪೂರ್ವ ಪ್ರಾಂಶುಪಾಲರಿಗೆ ಮಾತ್ರ ನೀಡಿದ ವಿಶೇಷ ವೇತನ ಭತ್ಯೆಯನ್ನು ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಿಗೂ ನೀಡಲು ಆಗ್ರಹ.
8. ಜೂನ್ 2016 ರ ವರೆಗೆ ಖಾಲಿಯಾದ ಅನುದಾನಿತ ಶಾಲೆಗಳಲ್ಲಿಯ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿಯ ಬೋಧಕ, ಬೋಧಕೇತರ ಸಿಬ್ಬಂದಿಯ ಭರ್ತಿಗಾಗಿ ಆಗ್ರಹ.
9. ಮಾಧ್ಯಮಿಕ ಮತ್ತು ಪದವಿಪೂರ್ವ ಉಪನ್ಯಾಸಕರ ಶಿಕ್ಷಕರ ವೇತನ ತಾರತಮ್ಮ ನಿವಾರಣೆಗಾಗಿ ಆಗ್ರಹ.
10. 2016–17 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಕಳೆದ ವರ್ಷದ ಮಾದರಿಯಲ್ಲಿಯೇ ನಡೆಸಬೇಕೆಂದು ಆಗ್ರಹ.
11. ಎಲ್ಲ ಅನುದಾನಿತ ಶಾಲೆಗಳಲ್ಲಿಯ ಶಿಕ್ಷಕರ ಹಾಗೂ ಶಿಕ್ಷಕೇತರ ಸಿಬ್ಬಂದಿಯವರಿಗೆ ವೈದ್ಯಕೀಯ ಸೌಲಭ್ಯವನ್ನು ನೀಡಲು ಆಗ್ರಹ.
12. ಸರಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳಿಗೆ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ನೀಡಲು ಆಗ್ರಹ.
13. ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುದಾನವನ್ನು ವಿಸ್ತರಿಸಲು ಆಗ್ರಹ. ಸರಕಾರ ಹಾಗೂ ಸಂಘ ಸಂಸ್ಥೆಗಳ ಸ್ವಾಯತ್ತತೆಯ ಕಟ್ಟಡಗಳಲ್ಲಿ ನಡೆಯುತ್ತಿರುವ ಅನುದಾನಿ ರಹಿತ ಶಾಲೆಗಳ ಕರಾರು ಪತ್ರವನ್ನು ಮುಂದುವರೆಸುವ ಕುರಿತು ಆಗ್ರಹ.
14. ಸರಕಾರಿ ಹಾಗೂ ಅನುದಾನಿತ ಎಲ್ಲ ಶಿಕ್ಷಕರಿಗೆ ಕೊಡಮಾಡುವ ಜಿಲ್ಲಾ ಮತ್ತು ರಾಜ್ಯ ಮಟ್ಟದ ಆದರ್ಶ ಶಿಕ್ಷಕ ಪುರಸ್ಕಾರಗಳನ್ನು ಅನುದಾನರಹಿತ ಶಾಲೆಗಳಿಗೂ ವಿಸ್ತರಿಸಲು ಆಗ್ರಹ.
15. ನಗರದಲ್ಲಿ ಬಹಳಷ್ಟು ಶಾಲೆಗಳಿಗೆ ಆಟದ ಮೈದಾನದ ಕೊರತೆ ಇದ್ದು ನಗರದ ಆಯಾ ಭಾಗಗಳಲ್ಲಿ ಆಟದ ಮೈದಾನಗಳನ್ನು ನಿರ್ಮಿಸಲು ಆಗ್ರಹ.

●

## ಮಳಿಗೆ 102

**ಹಿಂದೂ ಆಧ್ಯಾತ್ಮಿಕ ಮತ್ತು ಸೇವಾ ಮೇಳದಲ್ಲಿ ಶಿಕ್ಷಕ ಸಂಘವು ಮಳಿಗೆಯನ್ನು ತೆರೆದಿದ್ದು ಅಲ್ಲಿ ಶಿಕ್ಷಕ ಸಂಘವು ಕೈಗೊಂಡ ಸೇವಾ–ಸಂಸ್ಕಾರ ಚಟುವಟಿಕೆಗೆ ಸಂಬಂಧಿಸಿದ ಭಾವಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ಇದಲ್ಲದೆ ಶಿಕ್ಷಕ ಸಂಘವು ಶಿಕ್ಷಕರಿಗಾಗಿ ನಡೆಸಿದ ಶೈಕ್ಷಣಿಕ ತರಬೇತಿ, ಸಮಸ್ಯಾ ಪರಿಹಾರಕ್ಕಾಗಿ ಮಾಡಿದ ಹೋರಾಟ, ಮಹಿಳಾ ಚಟುವಟಿಕೆಗಳ ಭಿತ್ತಿಪತ್ರಗಳನ್ನು ಪ್ರದರ್ಶಿಸಲಾಗಿತ್ತು. ನಾವು ಪ್ರಕಟಿಸಿರುವ ಪುಸ್ತಕಗಳನ್ನು ಮಾರಾಟಕ್ಕೆ ಇಡಲಾಗಿತ್ತು. ಸಾವಿರಾರು ಮಂದಿ ಮಳಿಗೆಗೆ ಭೇಟಿ ಕೊಟ್ಟು ನಮ್ಮ ಎಲ್ಲಾ ಚಟುವಟಿಕೆಗಳ ಮಾಹಿತಿ ಪಡೆದರು.**

➢ ಪುಟ 5 ರಿಂದ..... 'ಸೂರೂಜಿ'

ಪ್ರೇರಣೆ ನೀಡಿದರು. ಸೂರೂಜಿ. ಇಂದು ಸಂಘದ ಆಶ್ರಯದಲ್ಲಿ, ಸ್ವಯಂ ಸೇವಕರು ಹತ್ತಿರ ಹತ್ತಿರ, 2 ಲಕ್ಷದಷ್ಟು ಸೇವಾಚಟುವಟಿಕೆಗಳನ್ನು ನಡೆಸುತ್ತಿದ್ದಾರೆ.

ತಮ್ಮ ಕಿಶೋರಾವಸ್ಥೆಯಲ್ಲೇ ರಾಷ್ಟ್ರಸೇವೆಯ ದೀಕ್ಷೆ ಪಡೆದು ಸೇವೆಯೆಂಬ ಯಜ್ಞದಲ್ಲಿ ಸಮಿಧೆಯಂತೆ ಉರಿದ, ಸೂರೂಜಿ ಇದೇ ನವೆಂಬರ್ 19 ರಂದು ತಮ್ಮ 92ನೆಯ ವಯಸ್ಸಿನಲ್ಲಿ ಕೈಲಾಸ ವಾಸಿಗಳಾದರು. 70 ವರ್ಷಗಳಿಗೂ ಮಿಗಿಲಾಗಿ ಭಾರತಾಂಬೆಯ ಸೇವೆಯಲ್ಲಿ ದೀಪದಂತೆ ಉರಿದರು. ತಾವೂ ಬೆಳಗಿದಲ್ಲದೆ, ಸಹಸ್ರಾರು ಜನರಿಗೆ ಬೆಳಕನ್ನು ತೋರಿದರು.

ಓರ್ವ ಶಿಲ್ಪಿಯ ಜೀವನದ ಸಾರ್ಥಕತೆ ಅವನು ಕೆತ್ತಿದ ಶಿಲ್ಪಗಳಲ್ಲಿ ಕಾಣಬಹುದು. ಬೇಲೂರು ಹಳೇಬೀಡಿನ ಶಿಲ್ಪಗಳು ಜಕಣಾಚಾರಿಯ ಮಹತ್ವವನ್ನು ಸಾರುತ್ತದೆ. ಹಾಗೆಯೇ ಸೂರೂಜಿಯವರ ಉಳಿಪೆಟ್ಟುಬಿದ್ದು ವ್ಯಕ್ತಿತ್ವ ನಿರ್ಮಿಸಿಕೊಂಡವರ ಈ ಕೆಳಗಿನ ಮಾತುಗಳು ಸೂರೂಜಿಯವರ ಮಹತ್ವವನ್ನು ಸಾರುತ್ತದೆ.

> **"ನಾನು ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಸಂಘದ ಸಂಪರ್ಕಕ್ಕೆ ಬಂದಿದ್ದು. ಅವರ ಮಾತುಗಳು, ನಡತೆ ಮತ್ತು ಅವರ ಶುದ್ಧ ಚಾರಿತ್ರ್ಯ ಇವುಗಳಿಂದ ಅಪಾರಲಾಭ ಪಡೆದವರಲ್ಲಿ ನಾನೂ ಒಬ್ಬನಾಗಿದ್ದೇನೆ ಎಂಬುದೇ ನನ್ನ ಪುಣ್ಯ.**
>
> **– ನ್ಯಾಯಮೂರ್ತಿ ಮ. ರಾಮಾಜೋಯಿಸ್**
> **ನಿವೃತ್ತ ರಾಜ್ಯಪಾಲರು**

> **"ಸೂರೂಜಿ ಅತ್ಯುತ್ತಮ ವ್ಯಕ್ತಿತ್ವವುಳ್ಳ, ಅಪಾರ ಧೈರ್ಯ ಸಾಹಸಗಳನ್ನು ಒಳಗೊಂಡ ಸಾತ್ವಿಕ ಸ್ವಭಾವದ ಯೋಗಿ. ಹಲವರಿಗೆ ಸ್ಫೂರ್ತಿ ಮಾರ್ಗದರ್ಶಕರು.**
>
> **–ವಿ. ಷಣ್ಮುಖನಾಥನ್**
> **ಮೇಘಾಲಯ, ಅರುಣಾಚಲ ಪ್ರದೇಶದ ರಾಜ್ಯಪಾಲರು**

> **"ಅವರು ನನ್ನನ್ನು ಒಬ್ಬ ವ್ಯಕ್ತಿಯಾಗಿ, ಓರ್ವ ಕಾರ್ಯಕರ್ತನಾಗಿ ರೂಪಿಸಿದರು. ಅನೇಕ ಉಪಕ್ರಮಗಳನ್ನು ಆರಂಭಿಸಲು ನನಗೆ ಪ್ರೇರಣೆಯಾದರು. ನಾನು ಎದೆಗುಂದಿದೆ. ಅಂದುಕೊಂಡಾಗಲೆಲ್ಲ ಸಹಾಯಹಸ್ತ ಚಾಚಿದರು. ಖಂಡಿತವಾಗಿ ಅವರು ನನ್ನ ಜೀವನದ ಮೇಲಿನ ಅತ್ಯಂತ ಶಕ್ತಿಶಾಲಿ ಪ್ರಭಾವಿಗೊಳಲ್ಲೊಬ್ಬರು. ನಾನು ಅವರಿಗೆ ಋಣಿಯಾಗಿದ್ದೇನೆ.**
>
> **– ಎಸ್. ಗುರುಮೂರ್ತಿ**
> **ಖ್ಯಾತಚಿಂತಕ, ಅರ್ಥಶಾಸ್ತ್ರಜ್ಞ ಹಾಗೂ ಅಂಕಣಕಾರ**

●

# ಎಸ್. ಎಸ್.ಎಲ್.ಸಿ. ಫಲಿತಾಂಶ ಸುಧಾರಣೆ: ಶಿಕ್ಷಕರ ಕಾರ್ಯಾಗಾರ

**ಕಲ್ಬುರ್ಗಿ :** ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ನೀಡಿ. ಜ್ಞಾನಧಾರೆ ಎರೆಯಬೇಕಾದ ಶಿಕ್ಷಕ ಹಾಗೂ ಅದನ್ನು ಸ್ವೀಕರಿಸಿ ಪ್ರಯತ್ನಶೀಲರಾಗಬೇಕಾದ ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಕಡಿಮೆ ಆಗುತ್ತಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಶಶೀಲ್ ನಮೋಶಿ ವಿಷಾದ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಾರ್ಯಾಲಯ ಸಂಯುಕ್ತಾಶ್ರಯದಲ್ಲಿ ನಗರದಲ್ಲಿ ದಿಶಾ ವಿಜ್ಞಾನ ಪಿಯು ಕಾಲೇಜಿನಲ್ಲಿ 10.12.2016 ಶುಕ್ರವಾರ ಹಮ್ಮಿಕೊಂಡಿದ್ದ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಸುಧಾರಣೆಗಾಗಿ ರಾಜ್ಯ ಸಂಪನ್ಮೂಲ ವ್ಯಕ್ತಿಗಳಿಂದ 2 ದಿನಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಹಿರಿದಾಗಿದ್ದು. ಮೊದಲು ಅವರು ಅಧ್ಯಯನಶೀಲರಾಗಬೇಕು. ಎಲ್ಲ ವಿಷಯಗಳ ಬಗ್ಗೆಯೂ ಮಾಹಿತಿ ಹೊಂದಿರಬೇಕು. ಅದರಲ್ಲೂ ಬೋಧನೆ ವಿಷಯದ ಮೇಲೆ ಹೆಚ್ಚಿನ ಹಿಡಿತ ಇರಬೇಕು. ಹೀಗಾದಲ್ಲಿ, ವಿದ್ಯಾರ್ಥಿಗಳಿಗೆ ಗುಣಮಟ್ಟದ ಬೋಧನೆ ನೀಡಲು ಸಾಧ್ಯವಾಗುತ್ತದೆ. ತಾನು ಬೋಧಿಸುವ ವಿಷಯ ಮತ್ತು ವಿದ್ಯಾರ್ಥಿಗಳನ್ನು ಪ್ರೀತಿಸಬೇಕು ಎಂದು ಸಲಹೆ ನೀಡಿದರು. ಶಿಕ್ಷಕರಿಗೆ ಸಾಕಷ್ಟು ಸಮಸ್ಯೆಗಳಲ್ಲಿದ್ದು ಅವರ ಬೇಡಿಕೆಗಳಿಗೆ ಸರಕಾರ ಸ್ಪಂದಿಸಬೇಕು. ಜಿಲ್ಲಾ ಫಲಿತಾಂಶದ ಸುಧಾರಣೆಗೆ ಶಿಕ್ಷಕರು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು ಎಂದರು.

ದಿಶಾ ಪಿ ಯು ಕಾಲೇಜಿನ ಅಧ್ಯಕ್ಷ ಶಿವಾನಂದ್ ಖಜೂರಗಿ ಮಾತನಾಡಿ. ವಿದ್ಯಾರ್ಥಿಗಳಲ್ಲಿ ಓದುವ ಆಸಕ್ತಿ ಮತ್ತು ಪರಿಶ್ರಮ ಕಡಿಮೆಯಾಗುತ್ತಿದೆ, ಯಾವುದೇ ಕ್ಷೇತ್ರದಲ್ಲಿ ಯಶಸ್ಸು ತಾನಾಗಿಯೇ ಸಿಗುವುದಿಲ್ಲ, ಅದಕ್ಕಾಗಿ ಅವಿರತ ಶ್ರಮ, ಬದ್ಧತೆ ಬೇಕಾಗುತ್ತದೆ. ಒಂದು ವೇಳೆ, ಈ ಗುಣಗಳು ಇರದಿದ್ದರೆ ಸಾಧನೆ ಸಾಧ್ಯವಿಲ್ಲ ಎಂದು ಹೇಳಿದರು.

ವಿದ್ಯಾರ್ಥಿಯು ಸಮಾಜದಲ್ಲಿ ಉತ್ತಮ ಪ್ರಜೆಯಾಗ ಬೇಕಾದರೆ, ವ್ಯಕ್ತಿತ್ವ ರೂಪಿಸುವ ಕೆಲಸ ಶಾಲಾ ಹಂತದಿಂದಲೇ ಆರಂಭಿಸಬೇಕು. ಸಫಲತೆಯ ಮೆಟ್ಟಿಲು ಹತ್ತಲು ಶಿಕ್ಷಕರ ಮಾರ್ಗದರ್ಶನ ಅಗತ್ಯ ಎಂದು ತಿಳಿಸಿದರು.

ಉಪ ನಿರ್ದೇಶಕ ಶಾಂತಗೌಡ ಪಾಟೀಲ್ ಮಾತನಾಡಿ, ಪ್ರಯತ್ನ ಮತ್ತು ಸಹಕಾರದೊಂದಿಗೆ ಜಿಲ್ಲಾ ಫಲಿತಾಂಶ ಹೆಚ್ಚಿಸುವಲ್ಲಿ ಎಲ್ಲರೂ ಸೇರಿ ಪ್ರಯತ್ನಿಸೋಣ ಎಂದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವಿಭಾಗ ಪ್ರಮುಖ ಮಹೇಶ್ ಆರ್. ಬಸರಕೋಡ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಚಂದ್ರಶೇಖರ್ ಪಾಟೀಲ್ ಸ್ವಾಗತಿಸಿದರು. ಅಶೋಕ್ ಜೋಶಿ ವಂದಿಸಿದರು. ●

## ಸುತ್ತೋಲೆ

### ವಿಷಯ: ಶಾಲಾ ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ಬಗ್ಗೆ

**ಉಲ್ಲೇಖ:** ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಸಚಿವರ ವಿಶೇಷ ಕರ್ತವ್ಯಾಧಿಕಾರಿಗಳು, ವಿಧಾನಸೌಧ, ಬೆಂಗಳೂರು, ಇವರ ಟಿಪ್ಪಣಿ ಸಂಖ್ಯೆ : ಪ್ರಾಪ್ರೌಶಿಸ/ ಓಎಸ್‌ಡಿ/ 11/2011 ದಿನಾಂಕ: 27.01.2011

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳನ್ನು ಪ್ರತಿ ವರ್ಷದ ಡಿಸೆಂಬರ್ ಅಂತ್ಯದೊಳಗಾಗಿ ಇಲಾಖಾ ಪೂರ್ವಾನುಮತಿ ಪಡೆದು ಶೈಕ್ಷಣಿಕ ಪ್ರವಾಸ ಕೈಗೊಳ್ಳಬೇಕಾಗಿದೆ. ಆದರೆ, ಕೆಲವು ಸಂಸ್ಥೆಗಳು ಇಲಾಖಾ ಪೂರ್ವಾನುಮತಿ ಇಲ್ಲದೇ ಡಿಸೆಂಬರ್ ಮಾಹೆ ಮುಗಿದ ನಂತರವೂ ಸಹ ಶೈಕ್ಷಣಿಕ ಪ್ರವಾಸ ಕೈಗೊಳ್ಳುತ್ತಿರುವುದು ಇಲಾಖಾ ಗಮನಕ್ಕೆ ಬಂದಿದೆ. ಇದರಿಂದಾಗಿ ವಿದ್ಯಾರ್ಥಿಗಳ ಕಲಿಕೆಗೆ ಹಾಗೂ ಪರೀಕ್ಷಾ ಸಿದ್ಧತೆಗೆ ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಕ್ರಮಕೈಗೊಳ್ಳಲು ನಿಮ್ಮ ವ್ಯಾಪ್ತಿಯಡಿಯಲ್ಲಿ ಬರುವ ಎಲ್ಲಾ ಶಾಲಾ ಮುಖ್ಯಸ್ಥರಿಗೆ ಸೂಚಿಸುವಂತೆ ತಿಳಿಸಿದೆ.

1. ಪ್ರತಿ ವರ್ಷ ಡಿಸೆಂಬರ್ ಮಾಹೆಯ ಅಂತ್ಯದೊಳಗೆ ಶೈಕ್ಷಣಿಕ ಪ್ರವಾಸ ಕೈಗೊಳ್ಳಬೇಕು.
2. ಯಾವುದೇ ಕಾರಣಕ್ಕೂ ಡಿಸೆಂಬರ್ ಮಾಹೆಯ ನಂತರ ಶೈಕ್ಷಣಿಕ ಪ್ರವಾಸ ಕೈಗೊಳ್ಳದೇ ಶೈಕ್ಷಣಿಕ ಚಟುವಟಿಕೆಗಳಿಗೆ ಪ್ರಾಧಾನ್ಯತೆ ನೀಡುವುದು.
3. ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ಇಲಾಖಾ ಅನುಮತಿಯನ್ನು ತಪ್ಪದೇ ಪಡೆದಿರಬೇಕು.
4. ಶೈಕ್ಷಣಿಕ ಪ್ರವಾಸಕ್ಕೆ ತೆರಳಲಿರುವ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಮಾಹಿತಿಯನ್ನು ಇಲಾಖೆಗೆ ಕಡ್ಡಾಯವಾಗಿ ನೀಡಿ ಅನುಮೋದನೆ ಪಡೆಯಬೇಕು.
5. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಥವಾ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖಾ ವಾಹನಗಳಲ್ಲೇ ಕಡ್ಡಾಯವಾಗಿ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳಬೇಕು.
6. ಯಾವುದೇ ಕಾರಣಕ್ಕೂ ಖಾಸಗಿ ಹಾಗೂ ಮಿನಿ ಬಸ್‌ಗಳಲ್ಲಿ ಪ್ರವಾಸವನ್ನು ಕೈಗೊಳ್ಳಬಾರದು.
7. ಈ ರೀತಿ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಅಥವಾ ಕರ್ನಾಟಕ ಪ್ರವಾಸೋದ್ಯಮ ಇಲಾಖಾ ವಾಹನಗಳಲ್ಲಿ ಪ್ರವಾಸ ಕೈಗೊಳ್ಳುವಾಗ ನಿಗದಿಪಡಿಸಿದ ಸ್ಥಳಾವಕಾಶ (seating capacity) ಮೀರದಂತೆ ಎಚ್ಚರ ವಹಿಸುವುದು.
8. ಪ್ರವಾಸ ಕೈಗೊಂಡಿರುವ ವಿದ್ಯಾರ್ಥಿನಿಯರ ಮೇಲ್ವಿಚಾರಣೆಯನ್ನು ಮಹಿಳಾ ಶಿಕ್ಷಕರೇ ಕಡ್ಡಾಯವಾಗಿ ನೋಡಿಕೊಳ್ಳತಕ್ಕದ್ದು, ಮೇಲ್ಕಂಡ ಸೂಚನೆಗಳನ್ನು ಉಲ್ಲಂಘಿಸಿದ ಶಿಕ್ಷಣ ಸಂಸ್ಥೆಗಳ, ಸಂಬಂಧಪಟ್ಟ ಮುಖ್ಯಶಿಕ್ಷಕರ, ಸಿಬ್ಬಂದಿ ವರ್ಗದವರ ಹಾಗೂ ಡಿಸೆಂಬರ್ ಮಾಹೆಯ ನಂತರ ಶೈಕ್ಷಣಿಕ ಪ್ರವಾಸಕ್ಕೆ ಅನುಮತಿ ನೀಡಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

**ಸಹಿ/ ತುಷಾರ್ ಗಿರಿನಾಥ್**
**ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು**

## ಹಿಂದು ಆಧ್ಯಾತ್ಮಿಕ ಮತ್ತು ಸೇವಾ ಮೇಳ – 2016

ಹಿಂದುತ್ವ ಎಂದರೆ ಅದೊಂದು 'ಜೀವನ ಪದ್ಧತಿ' – ನಮ್ಮೆಲ್ಲಾ ಸಂಸ್ಕೃತಿ, ಪರಂಪರೆಗಳ ಸುಂದರ ಸಂಗಮವಾಗಿದೆ. ಹಿಂದು ಧರ್ಮವೆನಿಸಿಕೊಂಡಿದೆ. ಹಿಂದುತ್ವಕ್ಕೆ ಆಧ್ಯಾತ್ಮದ ನೆಲೆಗಟ್ಟು ಹಾಗೂ ಸೇವೆಯ ಚೌಕಟ್ಟು ಎರಡೂ ಜತೆಗೂಡಿರುವುದು ಅದರ ಔನ್ನತ್ಯವನ್ನು ತಲೆ ತಲಾಂತರಗಳಿಂದ ಜಗತ್ತಿಗೆ ಸಾರಿದೆ.

ಪ್ರಖರ ಹಿಂದುತ್ವವಾದಿ ಹಾಗೂ ಪ್ರಖ್ಯಾತ ಆರ್ಥಿಕ ತಜ್ಞ, ಚೆನ್ನೈನ ಎಸ್.ಗುರುಮೂರ್ತಿಯವರ ಪ್ರೇರಣೆಯಿಂದ ಪ್ರಾರಂಭಗೊಂಡಿದ್ದ 'ಹಿಂದು ಆಧ್ಯಾತ್ಮಿಕ ಮತ್ತು ಸೇವಾ ಮೇಳ'. ಚೆನ್ನೈನಲ್ಲಿ ಹಲವು ವರ್ಷಗಳಿಂದ ಒಂದು ವಾರ ಕಾಲ ಈ ಮೇಳ ಸಂಪನ್ನಗೊಳ್ಳುತ್ತಿದೆ. ಬೆಂಗಳೂರಿನಲ್ಲಿ ಕಳೆದ ವರ್ಷ ಡಿಸೆಂಬರ್‌ನಲ್ಲಿ 5 ದಿನಗಳ ಕಾಲ ನಡೆದ ಈ ಮೇಳ ಅತ್ಯಂತ ಯಶಸ್ವಿಯಾಗಿತ್ತು ಮತ್ತು ಸುಮಾರು 3 ಲಕ್ಷ ಜನರನ್ನು ತನ್ನೆಡೆಗೆ ಸೆಳೆದಿತ್ತು. ರಾಜ್ಯದ ಇನ್ನೂರಕ್ಕಿಂತಲೂ ಹೆಚ್ಚು ಸೇವಾ ಮಳಿಗೆಗಳು ಈ ಮೇಳದಲ್ಲಿ ಭಾಗವಹಿಸಿ ತಮ್ಮ ಸೇವಾ ಚಟುವಟಿಕೆಗಳನ್ನು ಬಂದಂತಹ ಸಾರ್ವಜನಿಕರಿಗೆ ಪರಿಚಯಿಸಿದ್ದವು.

ಈ ವರ್ಷವೂ ಎರಡನೆ 'ಹಿಂದು ಆಧ್ಯಾತ್ಮಿಕ ಮತ್ತು ಸೇವಾ ಮೇಳ' ಡಿಸೆಂಬರ್ 14 ರಿಂದ 18 ರ ವರೆಗೆ ಬೆಂಗಳೂರಿನ ನ್ಯಾಷನಲ್ ಕಾಲೇಜ್ ಮೈದಾನ, ಬಸವನಗುಡಿಯಲ್ಲಿ ಆಯೋಜಿಸಲಾಗಿದೆ. ಮೇಳದ ಧ್ಯೇಯ ವಾಕ್ಯವೆಂದರೆ – 'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' (ತನ್ನ ಮುಕ್ತಿ ಹಾಗೂ ಜಗತ್ತಿನ ಹಿತಕ್ಕಾಗಿ) ಮತ್ತು 'ಈಶಾವಾಸ್ಯಮಿದಂ ಸರ್ವಮ್' (ಜಗತ್ತಿನ ಕಣಕಣವೂ ಭಗವಂತನಿಂದ ಆವರಿಸಲ್ಪಟ್ಟಿದೆ) ಎಂಬುದಾಗಿದೆ.

ಆರು ಪ್ರಮುಖವಾದ ಧ್ಯೇಯಗಳೊಂದಿಗೆ ಈ ಮೇಳವನ್ನು ಆಯೋಜಿಸಲಾಗಿದೆ. ಅವುಗಳೆಂದರೆ – 1.) ವನ ಮತ್ತು ವನ್ಯಜೀವಿ ಸಂರಕ್ಷಣೆ 2.) ಪರಿಸರ ಕಾಳಜಿ 3.) ಮಾಲಿನ್ಯ ನಿಯಂತ್ರಣ 4.) ಕುಟುಂಬ ಹಾಗೂ ಮಾನವೀಯ ಮೌಲ್ಯಗಳು 5.) ಸ್ತ್ರೀ ಗೌರವ ಮತ್ತು 6.) ರಾಷ್ಟ್ರಭಕ್ತಿ ಜಾಗೃತಿ. ಈ ಧ್ಯೇಯಗಳಿಗೆ ಪೂರಕವಾಗಿ 5 ದಿನಗಳ ಮೇಳದಲ್ಲಿ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.



ದಾರಿದೀಪ

ಭಾಗ 4

# ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಮತ್ತು ಕಾರ್ಯ

"ಥಾಮ್ಸನ್ ಕಾಲೇಜ್ ಆಫ್ ಇಂಜಿನಿಯರಿಂಗ್" – ಭಾರತದ ಅತಿ ಪ್ರಾಚೀನ ಇಂಜಿನಿಯರಿಂಗ್ ಕಾಲೇಜು. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕಿಂತಲೂ ಮುಂಚೆಯೇ ಆರಂಭವಾದ ಈ ವಿದ್ಯಾಲಯ ಈಗಲೂ ಕಾರ್ಯನಿರ್ವಹಿಸುತ್ತದೆ. ಆ ವಿದ್ಯಾಲಯವೇ ಈಗ, ರೂರ್ಕಿಲಾದ "ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ" ಎಂದು ಚಿರಪರಿಚಿತವಾಗಿದೆ.

ಈ ಕಾಲೇಜಿನ ತರಗತಿಗಳು ಆರಂಭವಾಗಿದ್ದು 1845 ರಲ್ಲಿ. ಆಗ ತಾನೇ ವಿಶ್ವದಲ್ಲಿ ಕೈಗಾರಿಕಾ ಕ್ರಾಂತಿ ಶುರುವಾಗಿತ್ತು. ಹೀಗಾಗಿ ಯುವಕರಿಗೆ ತಂತ್ರಜ್ಞಾನದ ಪರಿಚಯ ಮಾಡಿಕೊಡುವ ಸಲುವಾಗಿ ಈ ಸಂಸ್ಥೆಯನ್ನು ಬ್ರಿಟಿಷರು ಭಾರತದಲ್ಲಿ ತೆರೆದಿದ್ದರು. 1847 ರಲ್ಲಿ ಅಧಿಕೃತವಾಗಿ ಈ ಕಾಲೇಜು ಶಿಕ್ಷಣ ಸಂಸ್ಥೆಯಾಗಿ ಕಾರ್ಯ ಮಾಡಲಾರಂಭಿಸಿತು. ಆಗ ಭಾರತದಲ್ಲಿದ್ದ ಲೆಫ್ಟಿನೆಂಟ್ ಗವರ್ನರ್ ಸರ್ ಜೇಮ್ಸ್ ಥಾಮ್ಸನ್ ಅವರ ಹೆಸರನ್ನೇ ಕಾಲೇಜಿಗೆ ಇಡಲಾಯಿತು.

ಪ್ರಾರಂಭದ ದಿನಗಳಲ್ಲಿ, ಆಯ್ದ ಯುರೋಪಿಯನ್ನರಿಗೆ ಮತ್ತು ಭಾರತೀಯರಿಗೆ ಮಾತ್ರ ಈ ತರಗತಿಗಳು ಲಭ್ಯವಾಗಿದ್ದವು. ಮತ್ತು "ಸಿವಿಲ್ ಇಂಜಿನಿಯರಿಂಗ್" ಮಾತ್ರವೇ ಆಗ ಇದ್ದ ಒಂದೇ ಒಂದು ವಿಷಯ. ಈ ಸಂಸ್ಥೆಯ ಪ್ರತಿಷ್ಠೆ ಎಷ್ಟಿತ್ತೆಂದರೆ, ಇಲ್ಲಿಂದ ಉತ್ತೀರ್ಣರಾದ ಯಾರೂ ಕೆಲಸವಿಲ್ಲದೆ ಖಾಲಿ ಇರುತ್ತಿರಲಿಲ್ಲ. ಸರ್ಕಾರದ ನೀರಾವರಿ ಇಲಾಖೆ, ಲೋಕೋಪಯೋಗಿ ಇಲಾಖೆಗಳು ನೇರವಾಗಿ ಕಾಲೇಜು ವಿದ್ಯಾರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುತ್ತಿದ್ದರು. ಈ ಕಾಲೇಜಿನ ಮೊದಲ ಪದವೀಧರ 'ರಾಯ್ ಬಹಾದ್ದೂರ್ ಕನ್ಹಯ್ಯ ಲಾಲ್'.

'ಸಿವಿಲ್ ಇಂಜಿನಿಯರಿಂಗ್' ಪ್ರಮುಖವಾಗಿದ್ದ ಈ ಕಾಲೇಜಿನ ವಿದ್ಯಾರ್ಥಿಗಳು, ಪ್ರಪಂಚದಾದ್ಯಂತ ಅನೇಕ ನಿರ್ಮಾಣ ಕಾರ್ಯಗಳಲ್ಲಿ ಭಾಗಿಯಾಗಿದ್ದರು. ವಿಶೇಷವಾಗಿ, ಗಂಗಾ ನದಿಯ ಅನೇಕ ಕಾಲುವೆಗಳು, ಹಿಮಾಚಲ ಪ್ರದೇಶದ ಭಾಕ್ರಾ–ನಂಗಲ್ ಆಣೆಕಟ್ಟು ಸೇರಿದಂತೆ ಹಲವು ನಿರ್ಮಾಣಗಳು, ರಾಜಸ್ಥಾನದ ಕಾಲುವೆಗಳು, ಹಲವು ನೀರಾವರಿ ನಿರ್ಮಾಣಗಳು ಹೀಗೆ ಪಟ್ಟಿ ಬೆಳೆಯುತ್ತದೆ. ಅಷ್ಟೇ ಅಲ್ಲದೆ, ಈಜಿಪ್ಟಿನ ನೈಲ್ ನದಿಗೆ ಕಟ್ಟಲಾದ 'ಅಸ್ವಾನ್ ಡ್ಯಾಮ್' ನ ಕೆಲಸದಲ್ಲೂ ಈ ಕಾಲೇಜಿನ ಪದವೀಧರರು ಭಾಗಿಯಾಗಿದ್ದರು.

ಸ್ವಾತಂತ್ರ್ಯಾನಂತರ 1948ರಲ್ಲಿ 'ಯೂನಿವರ್ಸಿಟಿ ಆ್ಯಕ್ಟ್' ನ ಪ್ರಕಾರ ಈ ಕಾಲೇಜಿಗೆ 'ವಿಶ್ವವಿದ್ಯಾಲಯ'ದ ಮಾನ್ಯತೆಯನ್ನು ನೀಡಲಾಯಿತು. ತನ್ಮೂಲಕ 'ಥಾಮ್ಸನ್ ಕಾಲೇಜ್ ಆಫ್ ಇಂಜಿನಿಯರಿಂಗ್' ಈಗ 'ಯೂನಿವರ್ಸಿಟಿ ಆಫ್ ರೂರ್ಕಿ' ಎಂದು ನಾಮಕರಣಗೊಂಡಿತು. 1949 ರಲ್ಲಿ ಆಗಿನ ಪ್ರಧಾನಿ ಜವಾಹರಲಾಲ್ ನೆಹರು, ಈ ಸಂಸ್ಥೆಗೆ 'ಸ್ವತಂತ್ರ ಭಾರತದ ಮೊದಲ ಇಂಜಿನಿಯರಿಂಗ್ ವಿಶ್ವವಿದ್ಯಾಲಯ' ಎಂಬ ಮಾನ್ಯತೆಯನ್ನು ಅಧಿಕೃತವಾಗಿ ಘೋಷಿಸಿದರು.

ಸುದೀರ್ಘ ಸಮಯದ ನಂತರ, 2001 ರಲ್ಲಿ ಭಾರತ ಸರ್ಕಾರವು, ಇದನ್ನು ಭಾರತದ ಏಳನೇ "ಐ.ಐ.ಟಿ" ಎಂದು ಘೋಷಿಸಿದ ಮೇಲೆ, 'ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ – ರೂರ್ಕಿ' ಎಂದು ಜನಜನಿತವಾಯಿತು. 1847 ರಲ್ಲಿ ಆರಂಭವಾದ 'ಸಿವಿಲ್ ಇಂಜಿನಿಯರಿಂಗ್', ಈ ರಾಷ್ಟ್ರದ ಅತಿ ಹಳೆಯ ಇಂಜಿನಿಯರಿಂಗ್ ವಿಭಾಗ. ಅನಂತರ 1897 ರಲ್ಲಿ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಮುಂತಾದವುಗಳು ಶುರುವಾಗುತ್ತಾ, ಈಗ ಸುಮಾರು 21 ವಿಭಾಗಗಳು, ಈ ವಿಶ್ವವಿದ್ಯಾಲಯದಲ್ಲಿವೆ. ಭಾರತದ ವೈಜ್ಞಾನಿಕ ಬೆಳವಣಿಗೆಗೆ, ಈ ಸಂಸ್ಥೆ ಮತ್ತು ಸಂಸ್ಥೆಯ ವಿದ್ಯಾರ್ಥಿಗಳು, ಪದವೀಧರರು, ಉಪನ್ಯಾಸಕರು, ಸಂಶೋಧಕರು ಅಪಾರ ಸೇವೆ ಸಲ್ಲಿಸಿದ್ದಾರೆ.

ಭೀಮಸೇನ್ ಪುರೋಹಿತ್
BE. Mtech ಇಂಜಿನಿಯರ್
ಬೆಂಗಳೂರು



Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Printing : 17-12-2016 Date of Posting 20th or 21st of every month

# ಚಿತ್ರ ಸುದ್ದಿಗಳು




ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ) 'ಬಡ್ತಿ ಮತ್ತು ಭರ್ತಿಗಾಗಿ ಪತ್ರ ಚಳುವಳಿ, ಕಪ್ಪು ಪಟ್ಟಿ ಹೋರಾಟ, ನಂತರ ಮೂರನೇ ಹಂತದ ಹೋರಾಟವಾಗಿ ವಿಕಾಸಸೌಧದ ಮುಂದೆ ಧರಣಿ ನಡೆಸಿದ ಬಳಿಕ ಶಿಕ್ಷಣ ಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.




ಕ.ರಾ.ಮಾ.ಶಿ. ಸಂಘ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಾರ್ಯಾಲಯ ಸಂಯುಕ್ತಾಶ್ರಯದಲ್ಲಿ ಕಲ್ಬುರ್ಗಿಯ ದಿಶಾ ವಿಜ್ಞಾನ ಪಿಯು ಕಾಲೇಜಿನಲ್ಲಿ ಎಸ್. ಎಸ್.ಎಲ್.ಸಿ. ಫಲಿತಾಂಶ ಸುಧಾರಣೆ ಕುರಿತು ಶಿಕ್ಷಕರಿಗೆ ಕಾರ್ಯಾಗಾರ



ಕರ್ನಾಟಕ ಮಾಧ್ಯಮಿಕ ಶಿಕ್ಷಕ ಸಂಘದ ಬಾದಾಮಿ ತಾಲೂಕಾ ಘಟಕದ ಅಧ್ಯಕ್ಷರಾಗಿ ಶ್ರೀ ಎಸ್.ಎ ಭರಮಗೌಡರ ಆಯ್ಕೆಯಾಗಿರುವರು.



ಬೆಳಗಾವಿ ಜಿಲ್ಲಾ ಅಧ್ಯಕ್ಷರಾದ ಏಕನಾಥ ಪಾಟೀಲ್ ಮತ್ತು ಶಿಕ್ಷಕರ ಪ್ರತಿನಿಧಿ ಅರುಣ ಶಹಾಪುರ್ ಇವರು ಶಿಕ್ಷಣ ಮಂತ್ರಿಗಳಿಗೆ ಮನವಿ ಸಲ್ಲಿಸಿ ಚರ್ಚಿತ್ತಿರುವದು



ಕಲ್ಬುರ್ಗಿಯಲ್ಲಿ ಪತ್ರಿಕಾ ಘೋಷ್ಠಿ ನಡೆಸುತ್ತಿರುವುದು

**IF UNDELIVERED
PLEASE RETURN TO SENDER**

Published for K.S.S.T.A. by K. Narahari
# 55, Yadavasmruthi, 1st Main, Sheshadripuram
Bangalore-560020. ✆ : 080-23466495
Printed at : RASHTROTTHANA MUDRANALAYA
Bangalore - 560 019.

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು

srushtidesigns@gmail.com